ಕಣವಿ
ಕಾವ್ಯ
ಸಂಪುಟ
೧೦

ಕೇಂದ್ರ ಸಾಹಿತ್ಯ ಅಕಾದಮಿ ಪ್ರಶಸ್ತಿ ಪುರಸ್ಕೃತ

ಜೀವಧ್ವನಿ

ಚೆನ್ನವೀರ ಕಣವಿ



ಜೀವಧ್ವನಿ

ಚೆನ್ನವೀರ ಕಣವಿ

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
ನಂ. ೯, ರಮ್ಯ, ಗೋಕುಲಂ ಮೂರನೇ ಹಂತ, ಮೈಸೂರು

JEEWADHWANI
A collection of poems

Written by
Chennaveera Kanavi

Published by
Talukina Venkaniah Smaraka Granthamale
9, 'Ramya, Gokulam Third Stage,
Mysore - 570 002

Second Edition : 1983
Third Edition : 2007

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆಯಿಂದ

ಮೊದಲ ಮುದ್ರಣ : ೨೦೦೯

Pages : 78 **Price : Rs. 40/-**

Cover : Sudhakara Darbe

DTP : Chethana Graphics, Mysore

Printers : Good Touch Printers, Mysore

ಎರಡು ಮಾತು

'ನಗರದಲ್ಲಿ ನೆರಳು' ಪ್ರಕಟವಾದನಂತರ ಆರು ವರುಷಗಳ ಅವಧಿಯಲ್ಲಿ ನಾನು ಬರೆದ ಕವನಗಳ ಸಂಕಲನವಿದು. ಕವಿತೆ ಬರೆಯುವಾಗ ಇರುವ ಮನಸ್ಸಿನ ಒತ್ತಡ, ಲವಲವಿಕೆ, ಕಾಳಜಿಗಳು ಒಂದು ಬಗೆಯಾದರೆ, ಅವನ್ನೇ ಸಂಗ್ರಹರೂಪದಲ್ಲಿ ಪ್ರಕಟಿಸುವಾಗ ಒದಗುವ ಜವಾಬ್ದಾರಿ ಕವಿಯು ಕೈ ಹಿಡಿಯುತ್ತದೆ. ಕಾವ್ಯ ಸೃಷ್ಟಿಗೊಳ್ಳುವಾಗಿನ ಒಂದು ಬಗೆಯ ತೃಪ್ತಿ, ಆಮೇಲೆ ಉಂಟಾಗುವ ಯಾವುದೋ ಒಂದು ಕೊರತೆ ಇವುಗಳ ಸೆಣಸಾಟವೇ ಇದಕ್ಕೆ ಕಾರಣವಿರಬಹುದು. ಎಷ್ಟೇ ಪ್ರಯತ್ನಪಟ್ಟರೂ ಕವಿ ತನ್ನನ್ನು ಇಡಿಯಾಗಿ ಒಂದು ಕವಿತೆಯಲ್ಲಿ ಅಭಿವ್ಯಕ್ತಿಗೊಳಿಸಿಕೊಳ್ಳುವುದು ಬಹುಮಟ್ಟಿಗೆ ಅಸಾಧ್ಯ. ಆದರೆ ಅದನ್ನು ಬರೆದ ಕಾಲದ ಮನಸ್ಸಿನ ಭಾವಾನುಭವ, ಕವಿಯ ಅಭಿವ್ಯಕ್ತಿ ಸ್ವಾತಂತ್ರ್ಯದ ಫಲವಾಗಿ ಸಹಜ ರೂಪವನ್ನು ತಳೆದು ಸ್ವಯಂಪೂರ್ಣವೇ ಆಗಿ ತೋರಬಹುದು. ಏನೇ ಆದರೂ ಕಾವ್ಯ ಕಲೆಯಲ್ಲಿ ಪರಿಪೂರ್ಣತೆಯೆನ್ನುವದು ಮೃಗಜಲದಂತೆ ಅವನನ್ನು ಮುಂದೆ ಮುಂದೆ ಎಳೆದುಕೊಂಡು ಹೋಗುತ್ತಲೇ ಇರುವಂಥದು.

ಕುಟಿಲ ರಾಜಕೀಯದಿಂದ ಬಗ್ಗಡಗೊಂಡು ಭ್ರಷ್ಟತೆ ಗೀಡಾಗುತ್ತಿರುವ ನಾಡ ಜೀವನ, ನಾವು ಬದುಕುತ್ತಿರುವ ಸಾಮಾಜಿಕ ಪರಿಸರ, ಬಾಳುವೆಯ ಆಳದಲ್ಲಿರುವ ರಸವಂತಿಕೆ, ಪ್ರೀತಿ, ಅಂತಃ ಕರಣಗಳಿಂದ ಮನುಷ್ಯ ಸಂಬಂಧಗಳಿಗೆ ಒದಗುವ ಸಂತೋಷ ಹಾಗೂ ಸಾರ್ಥಕ್ಯಭಾವ, ನಮಗೆ ಅರಿವಿರದಂತೆಯೇ ಬಾಳನ್ನು ಬೆಳಗಿಸುವ ಲೋಕೋತ್ತರ ಕರುಣೆಯ ಸೆಳಕು-ಇವು ಎಂದಿನಂತೆ ಇಲ್ಲಿಯೂ ಬಹುಮಟ್ಟಿಗೆ ಪ್ರೇರಣೆ ನೀಡಿವೆ. ಹಲವು ಸಲ ಸಂಕೀರ್ಣವಾದ ಛಂದೋವಿನ್ಯಾಸದಲ್ಲಿ, ಕೆಲವು ಸಲ ಸಾಂದ್ರವಾದ ಸುನೀತ ಶಿಲ್ಪದಲ್ಲಿ, ಆಗೀಗ ಭಾವಗೀತದಲ್ಲಿ ಯಥೋಚಿತ ರೂಪುದಳೆದ ಕವನಗಳು ಇವು.

ಇವೆಲ್ಲವನ್ನೂ ಒಟ್ಟಿಗೆ ಆಸ್ವಾದಿಸುವ ಸಂಸ್ಕಾರ ಸಂಪನ್ನ ರಸಿಕ ಮನಸ್ಸಿಗೆ ಅವುಗಳ ಜೀವಧ್ವನಿ ತಮ್ಮದೇ ಎನಿಸೀತು. ಅದಕ್ಕೆ ತಕ್ಕಂತೆ ವಿಮರ್ಶಕನೂ ತನ್ನ ದೃಷ್ಟಿಕೋನವನ್ನು ಹಿಗ್ಗಿಸಿಕೊಳ್ಳಬಹುದೆಂದು ಆಶಿಸುತ್ತೇನೆ.

ಗುಣಾನುರಾಗಿಗಳೂ ಮಾನ್ಯ ಮಿತ್ರರೂ ಆದ ಡಾ|| ಹಾ. ಮಾ. ನಾಯಕರ ಪ್ರೀತಿಯ ಒತ್ತಾಯವಿರದಿದ್ದರೆ ಈ ಸಂಗ್ರಹ ಇಷ್ಟು ಬೇಗ ಹೊರಬರುತ್ತಿರಲಿಲ್ಲ. ಹೆಸರಾಂತ ವಿಮರ್ಶಕರೂ, ಆತ್ಮೀಯ ಸ್ನೇಹಿತರೂ ಆದ ಶ್ರೀ ಗೌರೀಶ ಕಾಯ್ಕಿಣಿ ಹಾಗೂ ಡಾ. ಜಿ.ಎಸ್. ಶಿವರುದ್ರಪ್ಪ ಮೊದಲಾದವರ ವಸ್ತುನಿಷ್ಠ ವಿಮರ್ಶೆ ನನ್ನ ಆತ್ಮವಿಶ್ವಾಸವನ್ನು ದೃಢಗೊಳಿಸುತ್ತಬಂದಿದೆ. ಡಾ. ಜಿ.ಎಸ್. ಕಾಪಸೆಯವರು ನಿರಂತರವಾಗಿ ತಮ್ಮ ಪ್ರೀತಿ ವಿಶ್ವಾಸಗಳನ್ನು ತೋರಿಸುತ್ತಲೇ ಬಂದಿದ್ದಾರೆ. ಇವರೆಲ್ಲರಿಗೂ ಇನ್ನೂ ಅನೇಕಾನೇಕ ಕವಿ-ಸಹೃದಯರಿಗೂ ನನ್ನ ಅನನ್ಯ ಕೃತಜ್ಞತೆಗಳು.

ಐಬಿಎಚ್ ಪ್ರಕಾಶನದಿಂದ ಈ ಸಂಕಲನವನ್ನು ಇಷ್ಟೊಂದು ಅಂದವಾಗಿ ಪ್ರಕಟಿಸಿ ನನ್ನ ಮನಸ್ಸನ್ನು ಹಗುರಗೊಳಿಸಿರುವ ಶ್ರೀ ಜಿ.ಕೆ. ಅನಂತರಾಮ್ ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

'ಚೆಂಬೆಳಕು' ಚೆನ್ನವೀರ ಕಣವಿ
ಕಲ್ಯಾಣ ನಗರ, ಧಾರವಾಡ-7
15-09-1980

ಮೂರನೆಯ ಆವೃತ್ತಿಗಾಗಿ

ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತವಾದ ಪ್ರಸ್ತುತ ಕೃತಿ 'ಜೀವಧ್ವನಿ'ಯ ಮೂರನೆಯ ಆವೃತ್ತಿಯನ್ನು ಪ್ರಕಟಿಸಲು ಮೂಲ ಪ್ರಕಾಶಕರಾದ ಐಬಿಎಚ್ ಪ್ರಕಾಶನವೇ ಮುಂದೆ ಬಂದಿರುವುದು ಸಂತೋಷದ ಸಂಗತಿ.

ಈ ಬಗ್ಗೆ ವಿಶೇಷ ಆಸ್ಥೆ ವಹಿಸಿದ ಶ್ರೀ ಸಂಜಯ ಅಡಿಗ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಪುಸ್ತಕದ ಎರಡನೆಯ ಮುದ್ರಣದ ಪ್ರತಿಯನ್ನು ತಮ್ಮ ಸಂಗ್ರಹದಿಂದ ಒದಗಿಸಿದ ಡಾ|| ಗಿರಡ್ಡಿ ಗೋವಿಂದರಾಜರಿಗೆ ಸ್ನೇಹಪೂರ್ವಕ ವಂದನೆಗಳು.

ಧಾರವಾಡ
೨೦-೪-೨೦೦೭
ಬಸವಜಯಂತಿ

ಚೆನ್ನವೀರ ಕಣವಿ

ಕೃತಜ್ಞತೆಯ ನುಡಿ


ಹಿರಿಯರಾದ ಶ್ರೀ ತ.ಸು. ಶಾಮರಾಯರು ಪ್ರಾರಂಭಿಸಿದ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯನ್ನು ಅವರ ಪುತ್ರ ಶ್ರೀ ಟಿ.ಎಸ್. ಛಾಯಾಪತಿಯವರು ಕಳೆದ ನಾಲ್ಕು ದಶಕಗಳಿಂದ ಯಶಸ್ವಿಯಾಗಿ ಮುಂದುವರಿಸಿಕೊಂಡು ಬಂದು ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸುವುದಲ್ಲದೆ 'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ' (೧೯೯೯) ಯನ್ನು ಪಡೆದ ಶ್ರೇಯಸ್ಸಿಗೂ ಪಾತ್ರರಾಗಿದ್ದಾರೆ. ಈ ಗ್ರಂಥಮಾಲೆಯಲ್ಲಿ ನನ್ನ ನಾಲ್ಕು ಪುಸ್ತಕಗಳು ಅಚ್ಚುಕಟ್ಟಾಗಿ ಪ್ರಕಟಗೊಂಡಿರುವುದನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸಿ ಕೊಳ್ಳುತ್ತೇನೆ.

ನನ್ನ ಸಮಗ್ರ ಕಾವ್ಯದ ಮೂರು ಆವೃತ್ತಿಗಳು ಪ್ರಕಟಗೊಂಡಿದ್ದರೂ ವಿದ್ಯಾರ್ಥಿಗಳ ಹಾಗೂ ಸಾಮಾನ್ಯ ಓದುಗರ ದೃಷ್ಟಿಯಿಂದ ಬಿಡಿಕವನ ಸಂಗ್ರಹಗಳ ಪ್ರತಿಗಳೂ ಅವರಿಗೆ ಲಭ್ಯವಾಗುವದು ಪ್ರಯೋಜನಕರವೆಂದು ಭಾವಿಸಿ, ಸ್ವತಃ ಲೇಖಕರೂ ಆಗಿರುವ ಪ್ರಕಾಶಕ ಛಾಯಾಪತಿಯವರು ಪ್ರಸ್ತುತ ಮಾಲೆಯನ್ನು ಪ್ರಾರಂಭಿಸಿದ್ದಾರೆ. ಅದಕ್ಕೆ ತಕ್ಕ ರಕ್ಷಾಪುಟದ ವಿನ್ಯಾಸವನ್ನು ಸುಂದರವಾಗಿ ರಚಿಸಿಕೊಟ್ಟ ಖ್ಯಾತ ಕಲಾವಿದ ಶ್ರೀ ಸುಧಾಕರ ದರ್ಭೆಯವರಿಗೂ ಈ ಯೋಜನೆಯ ಮುಖ್ಯ ಪ್ರೇರಕರಾದ ಶ್ರೀ ಛಾಯಾಪತಿಯವರಿಗೂ ನನ್ನ ವಂದನೆಗಳು.

ಧಾರವಾಡ
೨೦ - ೭ - ೨೦೦೯

ಚೆನ್ನವೀರ ಕಣವಿ

ಪರಿವಿಡಿ



(ಭಾವಚಿತ್ರ: ಲಿಂಗರಾಜ ಪಾಟೀಲ, ವಿಂಡ್ಸರ್, ಕ್ಯಾನಡಾ)

ಸಾವಿರದ ಸತ್ಯ

ಎಷ್ಟೆಂದರೂ ನಿನಗೆ ನಾಚಿಕೆಯಿಲ್ಲ.
ಹೊತ್ತು-ಗೊತ್ತು, ನೇಮ-ನಿತ್ಯ ಯಾವುದೂ ಇಲ್ಲ.
ಆಡಾಡುತ್ತ ಅಡ್ಡಗಾಲು: ನಡುವೆ ಒಡ್ಡುವ ಸವಾಲು.
ಓಡುವ ಭರಾಟೆಯಲ್ಲಿ ಬಂಡಿ ಕಳಕೊಂಡಂತೆ
ಕೊಂಡಿ, ಕಡೆಗೀಲು. ತೆರೆದ ಕಣ್ಣು ತೆರೆದಂತೆ
ಬಟಾಬಯಲು. ಹಾಡೇ ಹಗಲು ದರೋಡೆ:
ಹಿಂದೆ-ಮುಂದೆ ಸುತ್ತಲೂ ಹದ್ದು-ನೆರಳಿನ ಪಹರೆ.
ಚೂರೂ ಗುರುತು ಹತ್ತದ ಮುಖ ಚಹರೆ.
ಯಾರ ಮುಖಾಂತರವೊ ನಿನ್ನ ಕಂಡಾಗ ಸಂಕಟ, ದುಃಖ
ಮತ್ತೆ ಯಥಾಪ್ರಕಾರ:
ಪಿಸಿನೂಲು ತೆಗೆದು, ಹರಿದಲ್ಲಿ ಎಳೆ ಹಚ್ಚಿ
ಹುರಿ ಮಾಡಿ ಸುತ್ತುವ ಚರಖ-
ಮಗ್ಗದಲ್ಲಿ ಮೆಲ್ಲಗೆ ಬಗ್ಗಿ ನೇಯುವ ಸುಖ.

ಮರವೆಯ ಪರದೆಯಾಚೆ ಕಾಡಿನ ದಾರಿ-
ಕಾಲಮಾನಕ್ಕೆ ದೂರ.
ತೆರೆ ಎದ್ದಾಗ ಇದ್ದಕ್ಕಿದ್ದಂತೆ ಸನಿಹ, ಒಮ್ಮೆಲೆ ಕ್ರೂರ.
ಹುಟ್ಟಿನ ಬೆನ್ನ ಹುರಿಗುಂಟ ಏರಿ
ತುಟ್ಟತುದಿಗೊಂದು ತರಹ.
ಮುಟ್ಟಿ ನೋಡಿದ ಹಾಗೆ ದಿಟ್ಟತನದನುಭವ.
ಕೊಟ್ಟು, ರುಚಿತೋರಿ, ಇಸಗೊಂಡಂತೆ ನಾಲಗೆಯ ರವರವ.
ಇರಬಹುದು ನಿನಗಿದು ಸಹಜ; ಒಂದು ರೀತಿಯ ಮಜ.

ನಮಗೆ ಆಕಸ್ಮಿಕದ ಭಯ.
ಎಲ್ಲಾ ಕಳೆದು ಉಳಿದದ್ದು, ಉಳಿಯದಿದ್ದದ್ದೂ ನಿಜ.
ಒಣಗಿದೆಲೆ, ಬಾಡಿದ ಹೂವು, ಕಳಿತ ಹಣ್ಣು -
ಹುಳು ಕೊರೆದು, ಬಿರುಗಾಳಿ ಬೀಸಿ ಉದುರಿದರೆ
ಮತ್ತೆ ಮಣ್ಣು.
ಮಂಜಿನೊಳಗಿಂದ ಹೊರಬಿದ್ದ ಮುಂಜಾವು,
ಮಧ್ಯಾಹ್ನ ಏರುವ ಕಾವು-
ಸಾವಿರದ ಸತ್ಯ: ಒರೆಗಳಚಿದಲಗು.
ಹಗಲೆಲ್ಲ ತೊಗಲಬಾವಲಿ ಹಿಂಡು ತಲೆ-ಕೆಳಗು.
ನುಂಗಬೇಕಾದದ್ದು ಕಹಿ ಗುಳಿಗೆ-
ಸಿಕ್ಕು ನೀರಿನ ಸುಳಿಗೆ, ಮುಳುಗಿ
ಎದ್ದಂತೆ ಗುಳ್ಳಿ: ಕೊನೆಯ ಗಳಿಗೆ.

'ಅಲ್ಲ, ಮಾತ್ಹೇಳತೀನಿ'

ಯಾಕ ಸುಳ್ಳುಸುಳ್ಳ, ಸುದ್ದಿ ಹಬ್ಬಸ್ತೀರಿ ?
ಮೊನ್ನೆ ಸಭಾದಾಗ ಯಾರೂ ನನ್ನ ಕಡೆ ಚಪ್ಪಲಿ ತೂರಿಲ್ಲ.
ಖರೇ ಹೇಳ್ತೀನಿ:
ತೂರಿದ್ದರೂ ನಾ ಅದನ್ನ ನೋಡಿಲ್ಲ.
ಕಟ್ಟ ಖರೇ ಹೇಳ್ತೀನಿ :
ಅದು ನನಗ ಬಡದೇ ಇಲ್ಲ
ಪೇಪರಿನ್ಯಾಗ ಸುದ್ದಿ ಬಂದದಂತ್ಹೇಳಿ
ಅದನ್ನೆಲ್ಲಾ ನಂಬಾಕ ಹೋಗಬ್ಯಾಡ್ರಿ.
ಓದು ಒಲ್ಯಾಗ ಸುಡ್ರಿ.
ಅವರರ್ಏನ ಸುದ್ದ ಇರತಾರ ?
ನಡೀಬಹುದಾದ್ದನ್ನ ನಡದ್ ಹೋತು ಅಂತಾರ.
ಹೋತೋ, ಬಂತೋ-ಅಂತೂ ಸುದ್ದೀ ಮಾಡ್ತಾರ.
ಆದರ, ಯಾರೊ ಕರೇ ನಿಶಾನಿ ಹಿಡಿದಿದ್ದು ಮಾತ್ರ ಖರೆ.
ಯಾಕಂದರ ಬಿಳೇ ಟೊಪಿಗಿ ನಡುವ ಕರೇದು ಕಂಡ್ ಕಾಣಸ್ತದ.
ಅದರಾಗೇನ ತಪ್ಪದ ?
ಅವತ್ತ ಮಂದಿ ಕೂಡಿದ್ದೇನು ತುಸಾನ್?
ನನ್ನ ಭಾಷಣಂದರೇನ ಕಸಾನ್?
ಅಂಥಾ ಗದ್ದಲದಾಗ
ಯಾರದಾರ ಕಾಲಾಗಿಂದು ಕೈಯ್ಯಾಗ,
ಕೈಯ್ಯಂದು ತಲಿಮ್ಯಾಗ ಹೋಗೂದು
ಸ್ವಾಭಾವಿಕ, ಹೌದಲ್ಲ ?
ಅಂದ ಮ್ಯಾಲೆ, ಬೇಕಂತ್ ತೂರಿದರು
ಅಂತ ಯಾಕ ಬೊಬ್ಬಾಟ ಮಾಡ್ತೀರಿ ?

ಹೋಗಲಿ, ಒಂದು ವ್ಯಾಳೆ ತೂರೇ ಬಿಟ್ಟಾರಂತ ಇಟಗೊಳ್ರಿ :
ಚೆಂಡು ತೂರಿ ಹಿಡಕೋತಾರಲ್ಲಾ
ಹಾಂಗ್ಯಾಕ ಮಾಡಿರಬಾರದು ? ಹೇಳ್ರಿ.
ಇಲ್ಲ, ನನ್ನ ಕಡೇನs ತೂರಿದರು
ಅಂತ ನೀವನಬಹುದು.
ಹಂಗಾರ ನಾ ಒಂದು ಪ್ರಶ್ನೆ ಕೇಳ್ತೀನಿ:
ಅದೇನಿವರು ಸ್ವತಃ ತಯಾರ ಮಾಡ್ಸಿದ್ದ ?
ಯಾರದೊ ಅಂಗಡ್ಯಾಗ ಕೊಂಡದ್ದು
ಇಷ್ಟು ದಿವಸ ಹಾಕ್ಕೊಂಡು ಅಡ್ಡಾಡಿದ್ದು
ಈಗ ಹರಿದಿದ್ದೀತು, ಬೀಸಿ ಒಗದಿದ್ದಾರು-ಆತು.
ಅಲ್ರೀ, ಎಲ್ಲೀದರ ಸಿಟ್ಟ ತಂದು ಎಲ್ಲ್ಯಾರ ಹಾಕಿದರ
ಏನ ಬಂದ್ಹಂಗಾತು ?
ಗುಜರಾತದಾಗ ಗುಂಡು ಹಾಕಿದ್ರ, ಇವರ್‍ಯಾಕ ಗುರ್‍ರನಬೇಕು ?
ಧಾರಣಿ ಏರಸೂದು, ಮಾನ-ಮರ್‍ಯಾದಿ ಇಳಸೂದು
ನಾಲಗಿ ಹೊಳ್ಸೂದು-
ಎಲ್ಲಾ ಕಡೇನೂ ನಡದs ನಡದೈತಿ.
ಬರೇ ನಮಗ ಏನ ಗುತಿಗಿ ಕೊಟ್ಟೈತೆ ?
ಬಿಹಾರದಾಗ ನೋಡ್ರಿ, ಹ್ಯಾಂಗ ಬಾಯಿಗೆ ಅರಿವಿ ಕಟ್ಟಿಕೊಂಡು
ಹಿಂದೆ ಕೈ ಕಟ್ಟಿಕೊಂಡು ಮೆರವಣಿಗಿ ಹೊರಟಿದ್ರು-
ಅವರs ಪೇಪರಿನವರs ಕೊಟ್ಟಾರಲ್ಲ-
ಹಾಂಗ ಬಾಯಿ ಮುಚ್ಚಿಕೊಂಡು ಸುಮ್ಮನಿರಬೇಕ್ರಿಪ
ಅಂದರ ಶಾಣ್ಯಾತನ.
ಅಲ್ಲ, ಮಾತ್ಹೇಳತೀನಿ :
ಚಪ್ಪಲಿ ತೂರಿದ್ದು ತೂರಿ ಹೋಯ್ತು;
ಅವರಿಗೊಂದು ಹೊಸಾ ಜೋಡು ಕೊಡಿಸಿದರಾತಿಲ್ಲೊ ?
ಏನಂತೀರಿ ?

ಹುಲ್ಲು

ಈ ಜುಲೈ ತಿಂಗಳ ಜಿಟಿ ಜಿಟಿ ಮಳೆ -
ಗಟಗಟ ಕುಡಿದು ಧುತ್ತೆಂದು ಬೆಳೆದು ನಿಂತಿದೆ ಹುಲ್ಲು.
ಎಲ್ಲಾದರೂ ಸ್ವಲ್ಪ ಪಡುವು ಸಿಕ್ಕರೆ ಸಾಕು:
ಸಿಮೆಂಟು ಗೋಡೆಯ ಬಿರುಕು, ಟಾರು ಬೀದಿಯ ಒಡಕು -
ಎಂಥ ಇಕ್ಕಟ್ಟಿನಲ್ಲು ಹೊರಬರುತ್ತದೆ ತುರಾಯಿ ಹಚ್ಚಿಕೊಂಡು.

ಗುಡ್ಡ-ಮರಡಿ-ಬಯಲು ಸ್ವಂತ ಸಾಮ್ರಾಜ್ಯ.
ಹಿತ್ತಿಲದ ಮಾತು ಗೊತ್ತೇ ಇದೆ;
ಅಂಗಳದ ಅಂಗುಲಂಗುಲ ಕೂಡ ಅದರದೇ ಗುತ್ತಿಗೆ.
ಹೂದೋಟದಲ್ಲಿ ಹೇಳಿ ಕಳಿಸಿದ ಹಾಗೆ ಹೊತ್ತಿಗೆ
ಮೊದಲೇ ಬಂದು ಡೇರೆ ಹೊಡೆದು ತಳವೂರುತ್ತದೆ-
ನೀರೆರೆದು ಬೆಳೆಸಿದ ಹೂವಿನಗಿಡಕ್ಕೆಸೆದು ಸವಾಲು;
ಬೀಜದ ಕಸುವೊ, ಮಣ್ಣಿನ ಹಸಿವೋ-
ಮುಸುಗುಡುತ್ತದೆ ದನ ಮೇದು ಹೋದ ಮೇಲೂ.

ಕರುಣೆ ತೋರದೆ ಕುರುಪಿಯಿಂದ ಕೆತ್ತಿ ಕೆತ್ತಿ ತೆಗೆದು
ಹೊರಗೊಗೆದು ಹಸನಾಯಿತೆಂದು ಉಸಿರು ಬಿಡು-
ವಷ್ಟರಲ್ಲೇ ಕಷ್ಟದ ಮರುದಿನದ ಮುಖದಂತೆ
ಬ್ಲೇಡಿಗೆ ತಯಾರು. ನೀವಾರು, ನಿಮ್ಮ ಹೆಸರೇನು
ಕಸುಬಾವುದು-ಐದೆಸೆಯೆಲ್ಲ ಅದಕೆ ಗೊತ್ತು.
ಕರಿಕೆ : ಕಜ್ಜಿಯ ತುರಿಕೆ, ಹುಲ್ಲು : ಕಾಮನಬಿಲ್ಲು
ಕಣ್ಮುಚ್ಚಿ ಬಿಟ್ಟೇ -
ಬಿಡುತ್ತದೆ ಬಾಣ; ಹೇಳಿ ಎಲ್ಲಿಲ್ಲ ಅದರ ತಾಣ ?

ಇರಬಹುದು ಬಂಡೆಗಲ್ಲಿನ ಬೋಳುತಲೆ ಅಲ್ಲಲ್ಲಿ, ಅದರ
ತಳದಲ್ಲಿ ಮೆತ್ತಗೆ ಮಲಗಿರುತ್ತದೆ, ಪರೀಕ್ಷಿಸಿ ನೋಡಿ.
ಬೇಲಿದಾಟಿ ಒಳಗೆ ನುಗ್ಗುತ್ತದೆ; ಕಾಲ ಕೆಳಗೇ ಬಂದು
ಜಗ್ಗುತ್ತದೆ. ಲಾನಿನ ಕ್ರಾಪು ಕತ್ತರಿಸಿದಾಗ ಮಗ್ಗುಲದಲ್ಲಿ
ಹಿಗ್ಗುತ್ತದೆ; ಬರುಬರುತ್ತ ಒಗ್ಗಿಹೋಗುತ್ತದೆ.

ಮಳೆಗೆ ಹುಲ್ಲು ಮೊಳೆಯುವದು ಮೂಲಪ್ರವೃತ್ತಿ, ನಿಸರ್ಗ.
ಕಳೆ ತೆಗೆದು ಬಿತ್ತಿ ಬೆಳೆಯುವದು ನಾಗರಿಕ ಮಾರ್ಗ.
ಮರುಭೂಮಿಯ ಮಾತು ಬೇರೆ; ಅಲ್ಲಿ ಮಳೆಯೂ ಇಲ್ಲ.
ಆದರೂ ದೂರ ಅಲ್ಲೊಂದು ಓಯಸಿಸ್ಸು ಉಂಟಲ್ಲ ಮಾರಾಯರೆ -
ಅದಕ್ಕೇ ಅಲ್ಲಿ ಒಂಟಿ ಮಲಗಿ ಮೆಲುಕಾಡಿಸುವದು.

ಜೋಳದ ಪಾಳಿ

ಬೆಳುವಲದ ಹೊಲದ ಉದ್ದಗಲ ಎತ್ತುಗೈ ಎತ್ತರಕೆ
ನಿಂತು ಗರಿಗೆದರಿ -
ಹಾರಿ ಹೋಗುವದಿಲ್ಲ ಆಕಾಶಕ್ಕೆ.
ಬಿರುಸು ನೆಲದೆದೆಗೆ ಬೆವರಿಳಿಸಿ, ಹದಗೊಳಿಸಿ
ಬಿತ್ತಿ ಬೆಳೆದವನ ಕೈ
ಬಿಡುವುದಿಲ್ಲ.
ಮೈ ಕೊಡವಿ ಏಳುತ್ತೇನೆ ಮುಗಿಲ ಮುತ್ತಿನ ಹನಿಗೆ.
ಎಡೆ ಹೊಡೆದು, ಸುತ್ತುಮುತ್ತಿನ ಕಳೆಯ ಕಿತ್ತಾಗ
ದಿನಕೊಂದು ಗೇಣು ಸುಳಿದೆಗೆದು ಬೆಳೆಯುತ್ತೇನೆ.
ಶಿಸ್ತಿನ ಸಿಪಾಯಿಯಂತೆ ನಿಲ್ಲುತ್ತೇನೆ ಸಾಲಾಗಿ
ಮಸಾರಿಗೆ ಹಸಿರು ಧ್ವಜವನೆತ್ತಿ.
ಹೊಡೆ ಬಿಚ್ಚಿ ಹಗುರಾಗುತ್ತೇನೆ ಹೀಗೆ
ಚರಗ ಚೆಲ್ಲುವ ಸೀಗೆ ಹುಣ್ಣಿಮೆಗೆ.
ಹಕ್ಕಿ ಬಂದು ಕುಕ್ಕಿದರೂ ತೂಗುತ್ತೇನೆ
ತೆನೆಯೊಡನೆ ಮೆಲ್ಲಗೆ ನೋವಾಗದಂತೆ;
ಬಾಗುತ್ತೇನೆ ಭೂಮಿತಾಯಿಗೆ ಭಾರವಾಗದಂತೆ.
ಮಾಗುತ್ತೇನೆ ಒಂದಕ್ಕೆ ನೂರು ಸಾವಿರವಾಗಿ
ಕಾಳೆಲ್ಲ ಮುತ್ತಿನ ಗೊಂಡೆಯಾಗಿ.
ಹಂತಿಯ ಹಾಡು ಸೂಸಿ, ಬೀಸುಗಾಳಿಗೆ ಸೋಸಿ
ಕಣಕಣದಲ್ಲಿ ರಾಶಿಯಾಗುತ್ತೇನೆ.
ಅದೇ ಚಣವೆ ದನಕರುಗಳಿಗೆ ಹೊಟ್ಟು ಮೇವಿನ - ಬಣಿವೆ.
ಹಿಟ್ಟಾಗಿ, ಬಳೆಯ ತಾಳಕ್ಕೆ ಗುಟ್ಟಾಗಿ

ಬಡವರಂಗೈ ತುಂಬ ರೊಟ್ಟಿಯಾಗಿ,
ಖಾರ, ಉಳ್ಳಾಗಡ್ಡಿ, ಮೊಸರು, ಬದನೆಕಾಯಿ
ಪರಸ್ಪರ ಭೆಟ್ಟಿಯಾಗಿ,
ತುತ್ತು ತುತ್ತಿಗೆ ಶಿವಾ ಶಿವಾ ಎಂದು
ತುಂಬುತ್ತೇನೆ ಹಸಿದ ಹೊಟ್ಟೆ.
ಇಷ್ಟೂ ಸಿಗದಿದ್ದವರ ಗೋಳು ಕೇಳಿ, ಕಸವಿಸಿಕೊಂಡು
ಸಿಟ್ಟಿನಲಿ ಅವುಡುಗಚ್ಚಿ
ನಿಟ್ಟುಸಿರು ಬಿಟ್ಟಿದ್ದೇನೆ.
ಅವರಿಗೆ ಮಾತ್ರ ಗೊತ್ತು ನಿಜವಾದ ನನ್ನ ಬೆಲೆ -
ನೀವೇಕೆ ಏರಿಸುತ್ತೀರಿ, ಹೊಟ್ಟೆ ತುಂಬಿದ ಮೇಲೆ ?
ನನ್ನ ಮುಚ್ಚಿಟ್ಟು ಮುಗ್ಗುನಾರಿಸಬೇಡಿ.
ದಯವಿಟ್ಟು ಎಲ್ಲರಿಗೂ ಹಂಚಿ, ಅಡ್ಡ ಬರಬೇಡಿ
ನಾನವರ ದೇವರ ಗುಡಿ.

ಇಳಿದ ಬೆಲೆ

ಬೆಲೆ ಭಯಂಕರ
ಇಳಿಯುತ್ತಿವೆ ಒಮ್ಮೆಲೆ :
ಐದ್ಯೆದು ಪೈಸೆ.
ಇನ್ನೂ ಇನ್ನೂ ಇಳಿಯುತ್ತವಂತೆ
ಹತ್ಹತ್ತು ಪೈಸೆ-
ಹೊಟ್ಟೆ ತುಂಬ ಕೊಟ್ಟಿದ್ದಾರೆ
ಭರವಸೆ.

ಅಂತೂ ದೊಡ್ಡ ಭಾರ ಇಳಿದಂತಾಯ್ತು
ಮನೆಮಂದಿಗೆಲ್ಲ; ಇನ್ನು ನಿಶ್ಚಿಂತೆ-
ಎಂದು ಮಾತಾಡಿಕೊಳ್ಳುತ್ತಿದ್ದರು ಅತ್ತೆ-ಸೊಸೆ :
ರೇಶನ್ ಕಾಳಿನ ಕಲ್ಲು-ಕಸ ಆರಿಸಿ ಚೆಲ್ಲುತ್ತ
ಬೊಗಸೆ ಬೊಗಸೆ.

ಸಂಜೆ ಪೇಟೆಗೆ ಹೋಗಿ, ಎಲ್ಲಾ ಕಡೆಗು
ಧಾರಣೆ ಕೇಳಿ
ಸಣ್ಣ ಕೈ ಚೀಲದ ತುಂಬ ಸಾಮಾನು ತಂದಾಗ
ಗಂಡನ ಕಿಸೆಯಲ್ಲಿ ಉಳಕೊಂಡಿತ್ತು ಹೇಗೊ
ಗಾಳಿಗೆ ಹಾರಿ ಹೋಗದೆ-
ಒಂದು ನಯಾಪೈಸೆ.

ಒಂದು ವ(೦)ಚನ

ಎತ್ತೆತ್ತ ನೋಡಿದರತ್ತ ನೀನೆ ದೇವಾ
ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ
ಸಕಲ ಅಸ್ತ್ರ -ವಸ್ತ್ರಗಳ ವಿಸ್ತಾರದ ರೂಹು ನೀನೆ ದೇವಾ.
ನಿಚ್ಚ ನಿಚ್ಚ ಅವಕಾಶವಾಣಿಯಲ್ಲಿ ಮುಚ್ಚು ಮರೆಯಿಲ್ಲದೆ
ಪ್ರಮಾಣಿಸಿ ಕೇಳಬಹುದಯ್ಯ.
ವರ್ತಮಾನದ ಪುಟಪುಟದ ಸಂಕಟದಿಂದ
ನಿನ್ನ ನಾಮದ ಸಂಪುಟವಯ್ಯಾ.
ಭೂತವಾಗಿ ಕಾಡುತ್ತಿದ್ದವರನಾರೂ ಕಾಣದಂತಿರಿಸಿದೆಯಯ್ಯಾ.
ಭವಿಷ್ಯದ ಉಜ್ವಲತೆಯನ್ನು ನೆನೆದು
ಈಗಲೆ ಕಣ್ಣು ಕುಕ್ಕುವದಯ್ಯಾ.
ರಾಕ್ಷಸನಾಮ ಸಂವತ್ಸರದಲ್ಲಿ
ನಿನ್ನ ದಾರಿಗೆ ಅಡ್ಡ ಬಂದವರನೆಲ್ಲ
ಉದ್ದ ಮಲಗಿಸಿದೆಯಯ್ಯಾ.
'ನಳ'ಪಾಕದ ಉಪ್ಪಿನಕಾಯಿ ಇಂದೇ ಹೆಚ್ಚಿ
ಇಂದೇ ಕಳಿಯುವಂತಾದುದನ್ನು ಕಂಡು
ಕಣ್ಣು ಕಣ್ಣು ಬಿಡುವಂತಾಯಿತ್ತಯ್ಯಾ
ಉದ್ದಾನ ವೀರಭದ್ರೇಶ್ವರಾ.

ಒಣ ನಿಗ್ಗರ

ಓದುತ್ತ ಬರೆಯುತ್ತ
ಕಾಲು ಕೆರೆಯುತ್ತ
ಅತ್ತಿತ್ತ ಸುತ್ತು ಹಾಕಿ ಮಾತಾಡುತ್ತ
ಒಡ್ಡಿದ ಕುತ್ತ
ದಾಟಿ, ಕತ್ತೆತ್ತಿ ಮುಗಿಲು ನೋಡುತ್ತ
ಮಬ್ಬುಗತ್ತಲಿನಲ್ಲಿ ಒಬ್ಬೊಬ್ಬರೇ
ಸೇರಿಕೊಳ್ಳುತ್ತಿದ್ದಾರೆ ಹುತ್ತ.

ಮಳೆ, ಬಿಸಿಲು, ಗಾಳಿ, ಹಸಿರು
ಜಾರುವ ಕೆಸರು : ರೋಸಿಗಿಡುವಷ್ಟು
ಅದನೆಲ್ಲ ಸ್ವಲ್ಪ ಹೊತ್ತು ಬದಿಗಿಟ್ಟು
ಉಸಿರು ಬಿಗಿಹಿಡಿದು-ಬಿಟ್ಟು
ಹಿಡಿದು ಸಾವಕಾಶ
ರೂಢಿಯಾಗುತ್ತಿದೆ ಯಮ-ನಿಯಮದ ಗುಟ್ಟು.

ಎಲ್ಲ ಒಳಗೇ ಹತ್ತಿಕ್ಕಿಕೊಂಡು
ನುಂಗಿ ನೀರು ಕುಡಿದರೆ, ತುಂಬಿದ ಕೆರೆ
ಕೋಡಿ ಒಡೆದರೆ : ರಾಡಿ-ಅರೆ
ಮತ್ತೆ ವಿಪರೀತ: ವಾಚಕರೆ
ಪಾಚಕ ಶಕ್ತಿಗೂ ಒಂದು ಮಿತಿಯುಂಟು.
ಅಲ್ಲದೇ ಅದರದೇ ಗತಿಯುಂಟು.

ಮಾಡಬೇಕೆಂದರೆ -
ಬೇರೆ ಕೆಲಸ ಸಾಕಷ್ಟಿದೆ.
ನಿಜ;ಕ್ರಿಮಿನಾಶಕ ಹೊಡೆಯುವಾಗ ಮೂಗು -
ಬಾಯಿ ಕಟ್ಟಿಕೊಂಡದ್ದು, ಆಮೇಲೆಯೂ ಈ ಸೋಗು
ಎಷ್ಟೊತ್ತಿನವರೆಗೆ ಹಾಗೇ ಇಡುವುದು ?

ಸಾಧನೆ

ಮಾಡುವ ಕೃತಿಯೇ ಆಡುವ ಮಾತಿಗೆ ಸಫಲತೆ-ಸಂಕೇತ
ಇಲ್ಲ, ನಡುವೆಯೇ ಗುಡುಗುಡು ಎಂದರೆ ಎಲ್ಲಿ ಮಳೆಯ ನಾತ ?
ಬರಿ ಮಾತಿನ ಬಿರುಗಾಳಿಗೆ ನೆಲ ಹಸಿಯಾಗುವದೇನಣ್ಣಾ ?
ಪ್ರತಿಜ್ಞೆಗಳ ಪ್ರತಿ ಮಾಡಿ ಹಂಚಿದರೆ ಕುಂಚಕೆಲ್ಲಿ ಬಣ್ಣ ?

ಭಾವ ಹುಟ್ಟುವುದು, ದೇಶ ಕಟ್ಟುವುದು ಕೆಡುಕ ಮೆಟ್ಟುವುದು ಅಸರಂತ -
ಗುರಿಯು ಕಂಡರೂ ದಾರಿ ಹಿಡಿದು ನಡೆದೆರಡು ಹೆಜ್ಜೆ ಸ್ವಂತ -
ಪಟ್ಟ ಅನುಭವವೆ ಗಟ್ಟಿಗೊಂಡು ಹೊಸ ದೃಷ್ಟಿ ಸೃಷ್ಟಿಗೂಡಿ
ಸುತ್ತುಮುತ್ತು ಸಂವೇದ, ಶೋಧ, ಶಮೆ-ದಮೆಗೆ ಹೆಗಲು ನೀಡಿ.

ಮುಂದೆ ಬಂದವರು, ಹಿಂದೆ ಉಳಿದವರು-ನಡುವೆ ಹಳ್ಳಕೊಳ್ಳ :
ಮಾನವತೆಯ ಸೇತುವೆಯ ಕಟ್ಟಿ ಮಮತೆಯನು ತೋರಬಲ್ಲ
ದಾರಿಯುಂಟು, ಹರದಾರಿಗುಂಟ ಮೆರವಣಿಗೆಯಲ್ಲಿ ಹೊರಟು
ಮರೆಯದಿರಲಿ ಕತ್ತಲೆಯ ಮೂಲೆ : ಚಿತ್ತಕ್ಕೆ ನೆನಪಿನೇಟು.

ನಾನು-ನೀನು, ಅವರಿವರು ಸೇರಿ ವಹಿಸಿದ್ದೆ ಸಾರ್ವಜನಿಕ.
ನಾವೆ ತಿದ್ದಿ ಮುದ್ದಿಸಿದ ಬಿಂಬ ಸದ್ದಿರದೆ ಸಹಿಸುವನಕ
ಅರ್ಥಮರ್ಥ ಮೂರ್ತಿಯನು ಕಟೆದು ಲಗುಬಗೆಯ ಕಿರ್ತಿತವಕ:
ಹೊಟ್ಟೆದಪ್ಪ ಬಲು ದೊಡ್ಡ ಬಾಯಿ, ಕಣ್ಣೆರಡು ನೆತ್ತಿತನಕ.

ಕೆಳಗೆ ಕತ್ತಲೆಯ ಕೂಪದಲ್ಲಿ ಒತ್ತೊತ್ತಿ ಸತ್ತ ಬದುಕು
ಅಮಾನುಷದ ಬಿಗಿ ಮುಷ್ಟಿ ಬಿಡಿಸಿ ತಲೆಯೆತ್ತಿ ಕಂಡ ಬೆಳಕು;
ಕಟ್ಟಡಗಳೆದ್ದು ನಿಂತಂತೆ ಜನರ ಬೆನ್ನೆಲುಬು ನೇರವಾಗಿ
ಭರ್ತಿ ಬಾಳಿನಲಿ ಬಂದು ನೆಲಸುವದೆ ಜೀವ ಧ್ಯೇಯವಾಗಿ.

ಉಳ್ಳವರು ಮತ್ತೆ ಒಳ್ಳೊಳ್ಳೆಯವರು ಧುಮುಕಿದ್ದ ಕಳ್ಳ ಪೇಟೆ
ಉಳಿದವರಿಗೇನು ಬಳ್ಳೊಳ್ಳಿ ಸಿಪ್ಪೆ, ಹುಲಿಗೆ ಚಿಗರಿ ಬೇಟೆ.
'ಶುದ್ದ' ಎಂಬ ಅತಿ ಸಣ್ಣ ಶಬ್ದ ಕೋಶಕ್ಕೆ ಮೀಸಲೇನೊ
ಇದ್ದು ಬಿದ್ದ ಸರಕೆಲ್ಲ ಬೆರಕೆ; ಬರಿ ಹರಕೆ ಹೊತ್ತರೇನು ?

ಸುವಿಚಾರ ನಷ್ಟ, ಆಚಾರಭ್ರಷ್ಟ, ಅತ್ಯಂತ ಸ್ಪಷ್ಟ ಚಿತ್ರ
ಕಣ್ಣೆದುರಿಗಿದ್ದು ಕೈಲಾಗದಂತೆ ಮೈಮನಸು ಮುದುಡಿ ಕುಳಿತ
ಕೋಟಿ ಕೋಟಿ ಜನದೆದೆಯ ಮೀಟಿ ಹೊಸ ಅರಿವ ತೆರೆಯುವಾತ
ಯಾರೆ ಇರಲಿ, ಬಾಗಿಲವ ತೆರೆದು ಎದ್ದೇಳಿ: ಸುಪ್ರಭಾತ.

ಬೆಳೆವುದೆಲ್ಲ ಕೆಳಗಿಂದ, ಬೇರಿನೊಳಗಿಂದ ಸತ್ವ ಹೀರಿ
ಹಳ್ಳಿದಿಳ್ಳಿಗೂ ಇದೇ ಮಾತು, ಮತ್ತಿದೇ ಸಹಜ ದಾರಿ.
ಒಂದನೊಂದು ಭೇದಿಸುತ ನೂರು ವರ್ತುಳದ ಪರಿಘದಲ್ಲಿ
ಕೇಂದ್ರ ಬಿಂದುವನೆ ಮರೆತರೆಂತು ಸೌಂದರ್ಯ ನಕ್ಷೆಯಲ್ಲಿ ?

ಅದನು ನೆನೆದೆ ಹದ ನೋಡಿ ಬಂತು ಮದವೇರಿದವರ ತಿವಿದು
ಅಧಿಕಾರದಮಲು ಅಷ್ಟಷ್ಟೆ ಇಳಿದು, ಕಲಕಿದ್ದ ನೀರು ತಿಳಿದು.
ದುಡಿಮೆಯಲ್ಲಿ ನಿನಗೇನು ಕಡಿಮೆ, ಕೈಯೊಡ್ಡಲೇಕೆ ಮುಂತೆ ?
ಭಿನ್ನವಿದ್ದರೂ ಸರಿಸಮಾನ ಅನುಮಾನ ಬಾರದಂತೆ.

ವರ್ಷವೆಲ್ಲ ಸಂಘರ್ಷ, ಗುಡುಗು ಮಿಂಚೆಲ್ಲ ಮಳೆಗೆ ಹಾದಿ
ಹೊಲಸು ತೊಳೆದು ಹಸನಾಗಿ ಸೃಷ್ಟಿ ಹೊಸದಾಗಿ ಕಂಡ ದೃಷ್ಟಿ.
ಸ್ವೇಚ್ಛೆಗೊಂದು ಮಿತಿ, ನಿತ್ಯ ಕಾರ್ಯಗತಿ, ಗುಡಿಸಲಲ್ಲಿ ಜ್ಯೋತಿ
ವ್ಯಕ್ತಿ-ಶಕ್ತಿ-ಸುವಿಕಾಸ-ಭಾಸ-ಹವ್ಯಾಸ ಹಲವು ರೀತಿ.

ಆಂತರ್ಯದಲ್ಲಿ ಒಡಮೂಡಿ ಬಾಳಿನೊಡಗೂಡಿ ಬಂದ ಶಿಸ್ತು
ಒಲವು-ಚೆಲವು ಬಲಗೊಂಡು ಎಲ್ಲ ಗೆಲುವಿನಲಿ ಮೂಲವಸ್ತು.
ಹೊರಸಿಕೊಂಡು ಹೋದಂಥ ನಾಯಿ ಮೊಲನೇನ ಹಿಡಿವುದಯ್ಯ ?'
ಸ್ಮರಿಸಿಕೊಂಡು ಸಾಗೋಣ ಮುಂದೆ. ತಾ, ಮೊದಲು ನಿನ್ನ ಕೈಯ.

ಸಫಲತೆಯ ತೃಪ್ತಿ : ತತ್ಕಾಲ ದೀಪ್ತಿ ಸಾಧನೆಗಗಾಧ ವ್ಯಾಪ್ತಿ
ಶಿಖರದಲ್ಲಿ ಗುರಿ, ಸಾಹಸಕ್ಕೆ ಸರ್ವಾಂಗಶಕ್ತಿ ಕೋರಿ.
ನಿರಂತರವು ಎಚ್ಚರದ ಗಂಟೆ, ಹಚ್ಚಿರಲಿ ಸಾಲು ದೀಪ
ಸಮರ್ಪಣೆಗೆ ಕೃತುಶಕ್ತಿ ಸೇರಿ ತೋರುವದು ವಿಶ್ವರೂಪ.

ಆದರೂ ಅವನ ನೆನಪು

ಗಾಂಧೀಜಿಯ ಬಗ್ಗೆ ಈ ಹಿಂದೆ ಕವಿತೆ ಬರೆದು
ಗೆದ್ದೆ
ಎಂದು ಭಾವಿಸಿದ್ದೆ.
ಆದರೆ ಈಗ
ಶಬ್ದಗಳಿಗೆ ಸಿಲುಕದೆ, ಅರ್ಥಕ್ಕೂ ನಿಲುಕದೆ
ಬರಿಯ ಧ್ವನಿಯಾಗಿ ಬಿಟ್ಟಿದ್ದಾನೆ.

ಆದರೂ ಅವನ ನೆನಪು ಪದೇ ಪದೇ
ಕಾಡುತ್ತದೆ.
ನಮ್ಮ ಸೊಕ್ಕು-ಸೋಲು ಕ್ರೂರವಾಗಿ
ಬಿಚ್ಚಿಕೊಳ್ಳುತ್ತದೆ.
ಅವನೇ ತಂದುಕೊಟ್ಟ ಸ್ವಾತಂತ್ರ್ಯವನ್ನು
ಯಾರೋ ಕಸಿದು ತಮ್ಮ ಕಿಸೆಗೆ ತುಂಬಿ
ಕೊಳ್ಳುತ್ತಿರುವಂತೆ ಭಾಸವಾಗುತ್ತದೆ.

ನಾವು ಖಾಲಿ ಮೋಜು ಮಾಡುತ್ತಿರುವಾಗ
ನವಖಾಲಿ ಚಿತ್ರ
ಗಾಜು ಒಡೆದು ಹೊರಬರುತ್ತದೆ :
ದಿಲ್ಲಿಯ ಸಂದಿ-ಗೊಂದಿಗಳನ್ನು ಸುತ್ತಿ
ಮಂತ್ರಿ-ಮಹಲು-ದರಬಾರುಗಳಿಗೆ ಬೆನ್ನು ತಿರುಗಿಸಿ.
ಹೊಟ್ಟೆಯ ಮೇಲೆ
ಹಸಿಮಣ್ಣಿನ ಮುದ್ದೆಯಿಟ್ಟುಕೊಂಡು

ದೂರದ ಹಳ್ಳಿಯ ಹೊಲಗೇರಿಯಲ್ಲಿ
ಮರೆಯಾಗಿ ಬಿಡುತ್ತದೆ.

ಹುಚ್ಚ-ಮಹಾತ್ಮ ಎಂದು ಶಿಫಾರಸು ಕೊಟ್ಟು
ಕೇವಲ ಮನುಷ್ಯರಾದ ನಾವು
ಸೆರೆ -
ಮನೆಗೆ ಮರಳುತ್ತೇವೆ.
ಈಗಲೂ
ಅದರ ಬಾಗಿಲುಗಳು ತೆರೆದೇ ಇವೆ.

ನೆನಪು

ತಲೆ ಜಜ್ಜಿಕೊಂಡರೂ ನೆನಪಾಗುವುದಿಲ್ಲ, ಹಾಳಾದ್ದು -
ಸದ್ದಿಲ್ಲದೆ ಬುದುಂಗನೆ ಎದ್ದು ನಿಲ್ಲುತ್ತವೆ ಬೇಕು-ಬೇಡಾದ್ದು
ಯಾರೊ ಹೇಳಿದ್ದು: ಮರವೆಯ ಮದ್ದು, ಅರಿವಿನ ವಿಶಾಲ ಜಾಲ -
ದಲ್ಲಿ ಸಿಲುಕಿದ್ದು; ಕುಲುಕಿದರೆ ಮೇಲೆದ್ದು ಮುಗಿಬೀಳುವುದು.

ಕದ್ದು ಕೊರೆಯುತ್ತವೆ ನೆಲದಾಳದ ಖಣಿಗಳನ್ನು;
ಮಿಡುಕಿ ಹುಡುಕಾಡುತ್ತವೆ ಮಣಿಗಳನ್ನು, ಎಂದೋ
ಬಿದ್ದ ಮಿಂಚಿನ ಹನಿಗಳನ್ನು; ಉದ್ಬುದ್ಧ ತೆನೆಗಳನ್ನು;
ನಿರಾಳದಲ್ಲಿ ಮಮ್ಮಲ ಮರುಗಿ ಹೊರೆದ ಮಾತಿನ ಮೊನೆಗಳನ್ನು;
ಕನಸಿನಲ್ಲುದ್ಭವಿಸಿದ ವಿಚಿತ್ರ ಹೂವಿನ ಗೊನೆಗಳನ್ನು.

ಏನಿದ್ದರೂ ಸೂರ್ಯ ಮೂಡುವದು ತಪ್ಪಿದ್ದಿಲ್ಲ, ಸದ್ಯಕ್ಕೆ
ಅದೇ ಆಧಾರದಿಂದ ಲೋಕ ತೊಡಗಿಕೊಳ್ಳುವುದು-ಕೆಲಸಕ್ಕೆ
ಬಾರದ ಸಂಜೆ ಮರಳುವದು, ಆಕಳಿಸಿ ನಿದ್ದೆ ಹೋಗುವುದು.

ಎಲ್ಲಾ ವ್ಯವಹಾರ: ಗೊತ್ತು ಮಾಡಿದ ಕಿರಾಣಿ ಅಂಗಡಿಯಲ್ಲಿ
ತಕರಾರಿಲ್ಲದೆ ಸಾಮಾನು ತಂದೊಗೆದು ಮಾಡಿದ ಅಡಿಗೆ-
ಯಲ್ಲಿ ತುಂಬಿದ ರುಚಿಗೆ ಒಳಗೊಳಗೆ ವಿಸ್ಮಯ.
ಮಕ್ಕಳ ಹೊಸ ನಮೂನೆಯ ಉಡಿಗೆ ತೊಡಿಗೆಯ ಭಯ-
ವಿಲ್ಲದ ನಡಿಗೆ. ದಾರಿಯಲ್ಲಿ ಅವರಿವರ ಅರ್ಥವಿಲ್ಲದ ಮುಗುಳ್ನಗೆ
ಮತ್ತೆ ಮರೆವು: ಬದುಕು ತೆರವಾದಂತೆ, ಜಗದೊಳಗೆ
ಎಲ್ಲಿಯೂ ಜಾಗವಿಲ್ಲದಂತೆ. ಬರಿಯ ಜೋಕಾಲಿ ತೂಗಿದಂತೆ.

ದಿನದಿನದ, ಗಂಟೆ ಗಂಟೆಯ ಗಾಲಿಗಂಟಿದ ರೂಢಿ: ಉಜ್ಜಿ
ಉಜ್ಜಲಗೊಳಿಸಲೇಕೆ ಆಗುತ್ತಿಲ್ಲ ? ಉಸಿರು ಬಿಡದೆ ಓಡುವ
ರೈಲು ನಿಲ್ದಾಣಕ್ಕೆ ಬಂದುಬಿಟ್ಟಾಗ ಗದ್ದಲದ ಗಡಿಬಿಡಿ
ಮೂಲೆ ಮೂಲೆಗೂ ಚುರುಕು, ಅನುತಾಪ-ಹರ್ಷ-ಸಂಘರ್ಷ
ಜೀವಂತಿಕೆಯ ಸ್ಪರ್ಶ-ಎಲ್ಲ ಒಮ್ಮೆಲೆ ಹೊತ್ತು ಒಯ್ದಂತೆ
ಸೀಟಿ, ಮುಖದ ಮೇಲೆ ನಿಶಾನಿಯ ಬೀಸಿ ವೇಗ ಏರುವದು;
ಇಳಿಯುವದು ಇದ್ದು ಬಿದ್ದವರ ಉತ್ಸಾಹ ಅದೇ ದಾರಿ ಹಿಡಿದು.

ಅಲ್ಲವೆ ಮತ್ತೆ ? ಇಪ್ಪತ್ನಾಲ್ಕು ತಾಸು ಬರಿ ನೂಕು ನುಗ್ಗಲು
ಗುಪ್ತ ಒಪ್ಪಂದಗಳ ಮುಂದೆ ಸೋತು ನಿಲ್ಲುವ ಸವಾಲು.
ಗೋಡೆಗೆ ರಾಜಾರೋಷ ಮೆರೆದ ಹಲ್ಲಿ: ಕಿಡಕಿ
ಪಡಕಿನ ಇರುಕಿನಲ್ಲಿ. ಜೇಡಬಲೆ ಸುತ್ತಮುತ್ತಿನ ಹನಿ.
'ಒಂದು ಜೇಡವು ತನ್ನ ಬೀಡನು ಕಟ್ಟಲೋಸುಗ ಗೆಳೆಯನೆ'
ಮರೆತಿಲ್ಲ ಹಳ್ಳಿಯ ಶಾಲೆ, ಪದಚ್ಛೇದ ಮಾಡಿ ತಿಳಿಸಿದ್ದರೂ
ಹೊಳೆದದ್ದು ಈಗಲೆ; ಕೂಗಿದ್ದು ಪದೇ ಪದೇ ಅದೇ ಕೋಗಿಲೆ.

ಎದ್ದೊಡನೆ ದಿನಪತ್ರಿಕೆಯ ಸುದ್ದಿ: ಎಷ್ಟು ಬೇಕೋ
ಅಷ್ಟು ಗ್ರಂಥದೊಳಹೊಕ್ಕು ಓದಿದ್ದು ಕಪಾಟಿನಲ್ಲಿ ಗೆದ್ದಲು
ಹತ್ತದಂತೆ ಇರಲಿ ಮೇಜಿನ ಮೇಲೆ: ಹೂವ-ಹೂಜಿಯ ಬದಿಗೆ.
ಆಳಕ್ಕೆ ಅಗೆದು ಸುತ್ತ ಸೆಲೆಯೊಡೆದು ತುಂಬಿಕೊಳ್ಳಲಿ
ಸ್ವಂತ ಬಾವಿ, ಸೇದಿಕೊಳ್ಳಲಿ ನೆನಪು-ನೀರಡಿಸಿದವರು.
ಓದಿ, ವಾದಿಸಿ, ಸಾಧಿಸಿದರೂ ಹೃದಯ ಸಂವಾದಕ್ಕೆ ಬೇರೆ ಹದ.
ಬದುಕಿನಾರಾಧನೆಯ ಮಧ್ಯೆ ಹೊಮ್ಮುವದು ಜೀವನಾದ.

ನಮ್ಮ 'ಮನು'ವಿನ ಕಥೆ

ನಮ್ಮ ಸಣ್ಣ ಹುಡುಗನಿಗೆ ನಾಯಿ ಸಾಕಬೇಕೆಂಬ ಆಶೆ-
ಸ್ವಂತ ಮನೆಗೆ ಹೋದಾಗ ನೋಡೋಣ ಎಂದಿದ್ದೆ
ಹೋದ ಮರುದಿನವೇ ತಂದು ಬಿಟ್ಟ ಒಂದು ಕುನ್ನಿ
(ಅದು ಗಂಡು ಎಂಬುದು ಎಲ್ಲರಿಗೂ ಗೊತ್ತಾಯಿತೆನ್ನಿ)

ಈದು ಹದಿನೈದು ದಿನ ಆಗಿರಬಹುದು.
ಹಿಡಿದರೆ ನುಣುಚಿಕೊಳ್ಳುತ್ತಿತ್ತು, ಅಷ್ಟು ಮೃದು.
ಮೂಲೆಯಲ್ಲಿ ಹಾಸಿದ ಗೋಣಿ ತಟ್ಟು ಬಿಟ್ಟು
ಕೋಣೆಯ ತುಂಬ ಓಡಾಡುತ್ತಿತ್ತು ಲುಟುಪುಟು.

ಹಾಲಿನ ಬಟ್ಟಲು ಬಿಟ್ಟು ಮತ್ತೇನೊ ಹುಡುಕುತ್ತಿತ್ತು.
(ತಾಯಿ ಯಾರ ಮನೆಯಲ್ಲಿತ್ತೊ)
ಹಗಲು ಹೊತ್ತು ಕಾಲು ಕಾಲಲ್ಲೇ ಯಾವತ್ತು.
ಯಾರಾದರು ಎಲ್ಲಿ ತುಳಿದುಬಿಡುತ್ತಾರೊ ಎಂದು ಭಯ -
ಹೇಗೋ ಪಾರಾಗಿಬಿಡುತ್ತಿತ್ತು. ದೇವರ ದಯ.

ಕುಂಯ್ ಎಂದರೆ ಸಾಕು ನನ್ನ ಕಿವಿ ನಿಮಿರುತ್ತಿತ್ತು.
ಹುಡುಗರಿಗೆ ಬಾಯಿ ಮಾಡುತ್ತಿದ್ದೆ-ಅಲ್ಲೇ ಕುಳಿತಲ್ಲಿಯೇ.
'ಅದಕ್ಕೇನು ಧಾಡಿ, ಬರೇ ಡೋಕಾರತನ'-ಮನೆಯ ಯಜಮಾನಿ.
(ಐದು ಮಕ್ಕಳನ್ನು ಹೆತ್ತು ಬೆಳೆಸಿದವಳಲ್ಲವೇ?)
ಆದರೂ ಕುನ್ನಿಯ ಕಾಳಜಿಯ ಬಗ್ಗೆ ನನಗೆ ಗುಮಾನಿ.

ಹುಡುಗರಿಗಂತೂ ಅದು ಆಟದ ವಸ್ತು.
ಉಚ್ಚೆ ಹೊಯ್ಯುತ್ತಿತ್ತು ಪೊಗದಸ್ತು.
ಅದರಿಂದ ಸ್ವಲ್ಪ ಅಸ್ತವ್ಯಸ್ತ ಮನೆಯ ಶಿಸ್ತು-
ಆದರೂ ಪರವಾಯಿಲ್ಲ ಎನ್ನಿಸಿತು.

ಬೆಳೆದಂತೆ ಮನೆಯ ಕಂಪೌಂಡು ಸಣ್ಣದಾಯಿತು.
ನೆರೆಹೊರೆಯ ವಾರಿಗಿ ಕುನ್ನಿಗಳೊಡನೆ ಗುದುಮುರಿಗೆ, ಚಿನ್ನಾಟ.
ಹುಡುಗರು ಆಡುವ ಚೆಂಡು ಬಾಯಲ್ಲಿ ಹಿಡಿದು ಓಟ.
ದಾರಿಹೋಕರ ಕಂಡು ಒಮ್ಮೊಮ್ಮೆ ಗುರುಗುರು, ದುರುದುರು ನೋಟ.

ಹೆಸರುಗೊಂಡು ಕರೆದಿರೊ, ಬಾಲವಲ್ಲಾಡಿಸಿ ಬಂದೇಬಿಡುವುದು ಜಿಕ್ಕೊಂತ.
ಮರೆತೇಬಿಟ್ಟಿದ್ದೆ: ನಾವೆಲ್ಲ ಅದಕ್ಕೆ ಹೆಸರಿಟ್ಟದ್ದು 'ಮನು' ಅಂತ.

ಮನೆಗೆ ಯಾರಾದರೂ ಗುರುತಿನವರು ಬಂದರೆ, ಸಾಕು
ಎರಡೂ ಮುಂಗಾಲು ಎತ್ತಿ, ಅವರ ಬಟ್ಟೆಯ ಮೇಲೆ ಒತ್ತಿ
ಸ್ವಾಗತಿಸಿದಾಗಲೇ ಅದಕ್ಕೆ ಸಮಾಧಾನ.
'ಅದೇನೂ ಮಾಡುವುದಿಲ್ಲ' ಎಂದರೂ ಅವರ ಹೆದರಿಕೆ ಹೋಗಿರುವದಿಲ್ಲ.
ಇಷ್ಟು ಮಾತ್ರ ಖರೆ: ಇದುವರೆಗೆ ಯಾರನ್ನೂ ಕಡಿದಿಲ್ಲ.

ಪೋಸ್ಟ್‌ಮನ್ ಅಥವಾ ಪೇಪರಿನ ಹುಡುಗ ಬಂದಾಗ, ವಿಚಿತ್ರ -
'ಗುರ್' ದನಿ ಕೇಳಿ ಗೇಟಿನಿಂದಲೇ ಒಗೆಯುತ್ತಾರೆ ಪತ್ರ.
ಭಿಕ್ಷುಕರು ಬಂದಾಗ ಮಾತ್ರ ಮಲಗಿರುತ್ತದೆ ಸುಮ್ಮನೆ.
ಬಾರಿಸುವವರು ಬಂದರೂ-ತಕ್ಷಣ ಕಳೆದುಕೊಳ್ಳುತ್ತದೆ ಸಹನೆ.

ಹಿಡಿಯಹೋದಂತೆ ಮಾಡಿ ಹೆದರಿಸುತ್ತದೆ ಹಿಂದುಕೋಳಿ.
ಬೆಕ್ಕನ್ನು ಬೆನ್ನಟ್ಟಿ ಹಿಡಿದೇಬಿಡುತ್ತದೆ, ಚಂಡಾಳಿ.
ಆಕಸ್ಮಾತ್ ಬೇರೆ ನಾಯಿ ಬಂತೊ; ಮುಗಿದೇಹೋಯಿತು ಕಥೆ
ಇನ್ನೊಮ್ಮೆ ಇತ್ತ ಹಾಯುವುದಿಲ್ಲ - ಎನ್ನಿಸಿಬಿಡುತ್ತೆ.

ಮೈಗೆ ತೊನಸಿ ಅಂಟಿಕೊಂಡರೆ ಇದಕ್ಕೆ ವಿಪರೀತ ಸಿಟ್ಟು
ಏನೇನೊ ಮಾಡಿ ಕೆರೆದು ಓಡಿಸುತ್ತದೆ ಕಷ್ಟಪಟ್ಟು -
ಆದರೂ ಮತ್ತೆ ಇದ್ದಲ್ಲೇ ಇರುತ್ತವೆ ಸುತ್ತು ಸುತ್ತಾಡಿ.
ನಾವೇ ಹಿಡಿದು ತೆಗೆದಾಗ ನೋಡುತ್ತದೆ ಇಷ್ಟುದ್ದ ಚಾಚಿ ಮುಸುಡಿ.
ಗಾಯಕ್ಕೆ ಔಷಧಿ ಹಚ್ಚಿದರೆ ನೆಕ್ಕಿ ನೆಕ್ಕಿ ಮಾಯಿಸುವ ರೂಢಿ.
ಹೊಟ್ಟೆ ಕೆಟ್ಟಾಗ ಹುಲ್ಲು-ಪಲ್ಲು ತಿಂದು ಸುಧಾರಿಸಿಕೊಳ್ಳುತ್ತದೆ, ನೋಡಿ.

ಕಟ್ಟಿಹಾಕುವ ರೂಢಿ ಇಟ್ಟಿಲ್ಲ; ಆದರೂ ಇಲ್ಲ ಎಷ್ಟೂ ಅಪಾಯ.
ಕೊರಳಪಟ್ಟಿಯು ಮಾತ್ರ ಒಂದೆರಡು ದಿನದಲ್ಲಿ ಮಾಟಾಮಾಯ.
ಹೊರಗೆ ಹೊರಟಾಗ ಎದ್ದು ಬರುವದಿದ್ದಲ್ಲಿಂದ ಓಡಿ ಜೊತೆಗೆ
ಕುಕ್ಕುಲೋಟವೆ ಅದರ ಸಡಗರದ ನಡಿಗೆ.
ಮುಂಜಾನೆ ವಾಕಿಂಗಿನಲ್ಲಿ ಮುಂದಡಿಯಿಟ್ಟು ತೋರಿಸುತ ಹಾದಿ
ದಾರಿಬದಿಯಲ್ಲಿಯೇ ಲಗುಬಗೆಯಿಂದ ಮುಗಿಸುವದು ಪ್ರಾತರ್ವಿಧಿ.

ಸಲಿಗೆ ಕೊಟ್ಟ ನಾಯಿ ತಲೆಗೇರಿತು ಎನ್ನುವುದು ಅತಿಶಯೋಕ್ತಿ.
ಸೋಫಾ, ಕುರ್ಚಿ ಇತ್ಯಾದಿ ಹತ್ತಿ ಕೂಡುವುದರಲ್ಲಿ ಸ್ವಲ್ಪ ಆಸಕ್ತಿ.
ಬೆದರಿಸಿದರೆ ಮತ್ತೆ ನಾಚಿ ಕೆಳಗಿಳಿಯುವದು, ಚಿಂತೆಯಿಲ್ಲ.
(ಮುಂದಿನ ಚುನಾವಣೆಯವರೆಗೆ ಸಹಿಸುತ್ತ ಕಾಯಬೇಕಿಲ್ಲ).

ಈಗ ನನ್ನೆದುರು ಕುಳಿತು ಮಿಕಿಮಿಕಿ ನೋಡುತ್ತ ಬಾಲವಲ್ಲಾಡಿಸಿದೆ.
ಹೇಳಿದರೆ ನೀವು ನಂಬುತ್ತೀರೋ ಇಲ್ಲವೋ -
ತನ್ನ ಮುಂಗಾಲನ್ನೆತ್ತಿ ನನಗೆ ತಿವಿಯುತ್ತಿದೆ.

ಅದಕ್ಕೀಗ ಹಸಿವೆಯೆಂಬುದು ನನಗೆ ಗೊತ್ತು.
ನಿಮಗೂ ಹೊತ್ತಾಯ್ತು, ಮತ್ತೊಮ್ಮೆ ಕೂಡಿದಾಗ
ಅದರ ಕಥೆ ಮುಂದುವರಿಸುತ್ತೇನೆ.
ಬಾಯಿಯಿಲ್ಲ ಎನ್ನುವದಷ್ಟೆ; ಇಲ್ಲದಿದ್ದರೆ
ಅದೂ ನಮ್ಮಂತೆಯೆ, ಅಲ್ಲವೆ ?

ಎದ್ದೀರಾ ? ನೀವು ಎದ್ದೀರಾ !

ಎದ್ದೆವೆದ್ದೆವು ಶರಣು
ಎದ್ದೀರಾ ? ನೀವು ಎದ್ದೀರಾ !

ದಿನವೂ ದಿಲ್ಲಿಗೆ ಹೋಗಿ
ಗುಲ್ಲು ಗದ್ದಲ ಹಾಕಿ
ಇಲ್ಲಿದ್ದವರ ಬಾಳೆ-ಬದುಕು ಕಲ್ಲಾಬಿಲ್ಲಿ
ಮಾಡೀರಾ ! ಕದ್ದು ಓಡೀರಾ ?

ಮೂವತ್ತು ವರುಷಾತು
ಮಾಡಿದ್ದೇ ಮಸಲತ್ತು
ಕೈಹಿಡಿದು ಕೇಳಾಕ ಯಾರಿಗೆ ಕುವ್ವತ್ತು ?
ಆಯೋಗ : ಸುಯೋಗ
ಒಂದೊಂದಽ ಹೊರಬಿತ್ತು
ಮುಚ್ಚೀರಾ ? ಕಣ್ಣು ತೆರೆದೀರಾ !

ತಿಂದಿದ್ದೆ ತಿಂದಿದ್ದು
ತಲೆಗೆ ಅಮಲೇರಿದ್ದು
ಕಾಡು ಪ್ರಾಣಿಗಳೆಲ್ಲ ಕಸರತ್ತು ಮಾಡಿದ್ದು
ಬುದ್ಧಿವಂತರ ಸದ್ದು
ಅಡಗೀಸಿ ಹಾಕಿದ್ದು
ಬಿಟ್ಟೀರಾ ? ಬಾಯಿ ಕಟ್ಟೀರಾ !

ಕತ್ತಲು ಹಾಡೇ ಹಗಲು
ಇಡಿ ದೇಶದುದ್ದ
'ಎಲ್ಲರೂ ಮಲಗಿರಲು ಅವನೊಬ್ಬನೆದ್ದ'
ಬಿಡುಗಡೆ ತರಲೆಂದೆ
ಜೀವ ಹಿಡಿದಿದ್ದ
ತಿಳಿದೀರಾ ? ಮತ್ತೆ ಕಳೆದೀರಾ !

ಬಡವರ ಹೆಸರೀಲೆ
ತುಡುಗು ಮೇದವರೆಲ್ಲ
ಹಿಡಿಯಾಕ ಹೊಂಟಾರು ಗೆದ್ದ ಎತ್ತಿನ ಬಾಲ
ಸುತ್ತು ಕಾವಲು ಇರಲಿ
ಅಗ್ಯಾರ ಕಂಗಾಲ
ಬಿಟ್ಟೀರಾ ! ನೆನಪು ಇಟ್ಟೀರಾ ?

ನೆಟ್ಟಗ ನಡದರ
ಅಡಗಾಲು ಹಾಕಿ
ಕೆಡವಾಕ ನಿಂತಾರ ಅಲ್ಲಲ್ಲೆ, ಜ್ವಾಕಿ
ಅವರೂನು ಅಂದಾರು :
'ಭಾರತಮಾತಾಕಿ'
ಹೋದೀರಾ ! ಮೋಸ ಹೋದೀರಾ !

ಆದದ್ದು ಆಗ್ಹೋಯ್ತು
ಅಂದ್ರ ಹ್ಯಾಗ ?
ಹುಗಿದಿದ್ದ ಇತಿಹಾಸ ಹೊರಬಂತು ಮ್ಯಾಗ
ಭಂಡರು ನಿಂತಾರ
ಸೆರಗು ಮರೆಯಾಗ
ಕಟ್ಟೀರಾ ? ಹಿಡಿದು-ಬಿಟ್ಟೀರಾ !

'ಬಿದ್ದೀಯಬೆ ಮುದುಕಿ' -
ಪದವ ಹಾಡುದು ಬಾಕಿ
ಎಷ್ಟು ಇಟ್ಟರೂ ಕೂಡ ಬರವಲ್ದು ನಾಚಿಕಿ
ಬಾಲಬಡಕರಿಗಿನ್ನೂ
ದೆವ್ವದ ಹೆದರಿಕಿ
ಬರತೀರಾ ? ಅಲ್ಲೆ ಇರತೀರಾ ?

ಎದ್ದೆವೆದ್ದೆವು ಶರಣು, ಎದ್ದೀರಾ ! ನೀವು ಎದ್ದೀರಾ ?
ಎದ್ದಮೇಲೂ ಬುದ್ಧಿ ಸ್ವಾಧೀನದಲ್ಲಿರಲಿ
ಹದ್ದು ಮೀರದ ಹಾಗೆ ನಮ್ಮೆಲ್ಲ ನಡವಳಿ
ತಿದ್ದೀರಾ ? ಜೋಕೆ, ಬಿದ್ದೀರಾ !

ಅಡ್ಡಮಳೆ

ಅಡ್ಡಮಳೆ ಹೊಡೆದು ಹೋಯಿತು -
ಗುಡ್ಡದಾಚೆಗೆ, ಹೊಲ -ಗದ್ದೆಗಳ ದಾಟಿ, ಬೇರೂರಿಗೆ.
ಅಲ್ಲಿಯೂ ನಮ್ಮಂತೆ ಚಡಪಡಿಸಿ, ಉಸಿರು
ಕಟ್ಟಿ ಕುಳಿತಿರಬಹುದು ಜನರು : ಹೊಚ್ಚ ಹೊಸ ಮಳೆಗೆ.

ಉತ್ತರದ ಕಡೆಯಿಂದ ಬೀಸಿ ಬಂದಿತು ಗಾಳಿ
ದಕ್ಷಿಣಕೆ, ಮೋಡದೊಳಗೊಂದು ಮೋಡ
ಉದ್ಭವಿಸಿ ಆಕಾಶವನ್ನೆಲ್ಲ ವ್ಯಾಪಿಸಿತು.
ನೋಡ ನೋಡುತ್ತ ನೆಲವ ಗದಗಮಿಸಿತು.

ಕೋಲ್ಮಿಂಚು ಕೊರೆದು ಕೋರೈಸಿ, ಗುಡುಗು ಹುಟ್ಟಿಸಿ ನಡುಗು
ಎಲ್ಲೋ ಬಡಿಯಿತು ಸಿಡಿಲು : ಬಟಾ ಬಯಲು
ನಡುವೆ ತಣ್ಣಗೆ ತಂಪು, ನೀರೆಲ್ಲ ಕೆಂಪು ಹೊನಲು.
ಬಿರುವಿಸಿಲಿನಾಳಿಕೆ ಬಗ್ಗು ಬಡಿದು ಹೊರಬಿದ್ದ ಬಿರುಗಾಳಿ -
ಆಂದೋಲನದ ಅಮಾಯಕ ತಿರುವು; ಹೊಲಸೆಲ್ಲ
ತೊಳೆದು ಹೊಳೆದಿಹುದು ಹೊಸ ಜೀವನದ ಕಾಂತಿ.
ವಾತಾವರಣದಲ್ಲಿ ನಿರ್ಭೀತಿ, ನಿರಂಕುಶಮತಿ.

ಧ್ವನಿ-ದನಿ

ಮುಂಜಾವಿನಿಂದ ಮುಂಜಾವು: ಬಗೆ ಬಗೆಯ ಧ್ವನಿ -
ಗಳೇರಿಳಿವು. ಋತು ಋತುವಿಗೊಂದು ಬನಿ.
ಎಷ್ಟೋ ದನಿಗೆ ಕಿವುಡರು ನಾವು ಕಂಡು ಕಂಡೂ.
ಮಹದನುಭವವ ಕಳೆದುಕಂಡು, ಹಿಂದು-ಮುಂದಿರದ
ಸರಪಳಿ ತುಂಡು.

ತನಿಗೊಂಡ ಮಕ್ಕಳುಲಿ : ತಾಯಿ - ಮಗು ಸೆಳೆತ
ಯುಗ ಯುಗದ ಮಮತೆ ಓತಪ್ರೋತ. ಆಗಾಗ
ಬದುಕಿನ ಬಿರುಕಿನಿಂದೊಗೆವ ಅಸಹಾಯ, ಕ್ಷೀಣ ಧ್ವನಿ.
ಮಳೆ-ಗಾಳಿ ಹೊಯ್ಲು, ಉರುಳುರುಳಿ ನರಳುವ ರೈಲು; ಅಬ್ಬರಿಸಿ
ನುಗ್ಗಿ-ತಡಸಲು, ಮೌನದಲಿ ಕಿವಿಗೊಟ್ಟ ಬಟ್ಟ ಬಯಲು.

ಸ್ನೇಹ ಕೂಟದ ಬೆಚ್ಚಗಿನ ದನಿ, ಸಂತಸದ ತುಂಬು-ತುಳುಕು
ಪಯಣದಲಿ ಕೊಲ್ಲಾರಿ ಬಂಡಿಯ ಲಯದ ಗಿಲಿಕ್ ಗಿಲಕು.
ಟಾರು ಬೀದಿಯಲಿ ಟಾಂಗಾ ಕುದುರೆ ಟಕಕ್ ಟಕಕು.
ಮಟಮಟ ಮಧ್ಯಾಹ್ನ ಗೂಡಿನಲಿ ಗುಬ್ಬಿ-ಗುಟುಕು.

ಬಿರುಗಾಳಿ ಮುನ್ನ ಮರಮರವ ಹೊಕ್ಕು ತೀಡುವ ಗಾಳಿ.
ಭೆಟ್ಟಿಗೆ ಬರುವ, ಮರೆತ ಗೆಳೆಯನ ತ್ವರಿತ ಫೋನಿನುಲಿ.
ಹೊರಗಿಂದ ಬಂದ ಮನೆಯವರ ನಗುಮೊಗದ ಕಲಕಲ ಮುದ್ದು-
ಬೇಲಿಯಾಚೆಗೆ ಬಣ್ಣ ಬಣ್ಣದ ಹಕ್ಕಿ ಹಾರಿದ ರೆಕ್ಕೆಸದ್ದು

ನಿದ್ದೆಗೂಸಿನ ಉಸಿರಾಟ ನಿರಾಳ ಸೂಕ್ಷ್ಮ ಸೂತ್ರ ಧ್ವನಿ.
ಇರುಳಿನಲಿ ಹೊರಗೆ ಸಣ್ಣಗೆ ಬರುವ ಮಳೆಯ ಹನಿ.
ಅಟ್ಟದ ಮೇಲೆ ಮೇಷ್ಟ್ರು ಮಕ್ಕಳಿಗೆ ಹೇಳುವ ಗಣಿತ.
ಹೊತ್ತುಗಳೆಯದೆ ಉಣ್ಣೆಯಂಗಿಯ ಹೆಣೆವ ಸೂಜಿಗಳ ಕ್ವಣಿತ.
ಶಬ್ದಗಳ ಹುಡುಹುಡುಕಿ ಮೌನ ಭೇದಿಸುವ ಪ್ರೇಮಿಗಳ
ಎದೆಯ ಮಿಡಿತ.

ದಂಡೆಗಪ್ಪಳಿಸಿ, ನಿದಾನ ಹಿಂದೆ ಸರಿಯುವ ಕಡಲ ತೆರೆ.
ಬಳೆಬಳೆಯಾಗಿ ಬಂದು ಸುಳಿದು ಸಿಂಗರಿಸುವ ಕೆರೆಯ ಸಣ್ಣ ಅಲೆ.
ನೆರೆಮನೆಯ ಜಗಳ ಕದ್ದು ಕೇಳುವ ಕಿವಿಗೆ ಮುತ್ತಿನೋಲೆ.

ಆಕಾಶದುದ್ದ ಕೊರೆವ ಹದ್ದು-ಕಾಗೆಗಳ ಕರ್ಕಶ ಧ್ವನಿ.
ಸುಗ್ಗಿ ಮಾಡುವ ರೈತರುತ್ಸಾಹ, ಕೇಕೆ. ಹೊಲದ ಬದುವಿನಲಿ
ಮೇಯುವ ದನದ ಕೊರಳ ಕಿಂಕಿಣಿ ಸರಣಿ, ಕರುವಿನಂಬಾ ದನಿ.

ಅಡುಗೆ ಮನೆಯಲಿ ತಾಟು-ಲೋಟಗಳ ಭರವಸೆಯ ಸಿಂಪನಿ.
ಮಧ್ಯಾಹ್ನ ಎದ್ದು ಆಕಳಿಸಿದಾಗ ಚಹದ ಕಪ್ಪು-ಬಸಿ ಒಪ್ಪಾಗಿ
ಟಿಂಟಿಣಿ ದನಿ.
ಮಲಗಿ ಓದುತ್ತ ಕಾದಂಬರಿಯ ಕುತೂಹಲದ ಪುಟ ಪುಟ ದನಿ.
ತಲ್ಲೀನ ಕುಳಿತ ಗಾಯಕನ ಹಿಂದೆ ಮಾಯಕದ ತಂಬೂರಿ
ನರನರವ ಮೀಟಿ ಹೊರಡಿಸುವ ಜೀವಧ್ವನಿ.

ನಿರಂತರ ಉರುಳುರುಳಿ ಮೊರೆವ ಸಮುದ್ರ:
ಬಾನಿನಲಿ ಮತ್ತೆ ಗುಡುಗಿನ ದನಿ. ಎಲ್ಲಿ
ಏಕಾಂತದಲಿ ಮಿಡಿದು ಮಾರ್ದನಿಗೊಳುವ ನನ್ನೊಳದನಿ ?
ಲೋಕಾಂತದಲಿ ಧ್ವನಿಗಳೇರಾಟ ಚೀರಾಟಗಳ ನಡುವೆ
ನಾನು ಮೌನಿ.

ಈಗ ಕವಿತೆ ಬರೆಯಲು......

ಈಗ ಕವಿತೆ ಬರೆಯಲು ನಾನು ಹೊರಟಿಲ್ಲ:
ಹೊರಟದ್ದು ಆಫೀಸಿಗೆ : ಉಂಡು ಅವಸರದಿಂದ-
ಸಿಕ್ಕರೆ ಬಸ್ಸು ಹಿಡಿದು, ಇಲ್ಲ, ಮೆಲ್ಲಗೆ ನಡೆದು;
ಸಡಿಲಾಗಿರುವ ಕೋಟು ಪ್ಯಾಂಟುಗಳನ್ನು ಇದ್ದು -
ದರಲ್ಲಿ ಸರಿಪಡಿಸಿಕೊಂಡು. ಎಷ್ಟೋ ವರ್ಷಗಳ
ಹಿಂದೆ ಎಡಗಾಲ ಹಿಂಬಡ ಗಾಯ ಮಾದದ್ದು
ಈಗ ಮತ್ತೆ ನೋವು. ಮದುವೆಯಲಿ ಕಟ್ಟಿದ ವಾಚು
ಆಗೀಗ ಬಂದುಬಿದ್ದರೂ ಅದರಂತರಂಗದದ್ಭುತ-
ಸೂಕ್ಷ್ಮ ಯಂತ್ರಕ್ಕೆ ಸಾಗಿದ ನಾನು ಮಂತ್ರ ಮುಗ್ಧ.

ನನ್ನ ದಾರಿಗೆ ಅಡ್ಡ ಎಮ್ಮೆಗಳು (ನಮ್ಮೂರ ದೊಡ್ಡ
ಹೆಮ್ಮೆಗಳು) ಉದ್ದಕ್ಕೂ ಉಚ್ಚೆಹೊಯ್ಯುತ್ತ, ಸಗಣಿ
ಹಾಕುತ್ತ, ಅತ್ತಿತ್ತ ಸುಖವಾಗಿ ಬಾಲ ಜಾಡಿಸುತ್ತ;
ಸೈಕಲ್ಲು, ಕಾರು, ಸ್ಕೂಟರು ಜಾರಿ, ತಮ ತಮಗೆ ದಾರಿ
ಮಾಡಿಕೊಂಡು. ಚೀಲದ ತುಂಬ ಪುಸ್ತಕ ಭಾರ ಹೊತ್ತು
ಶಾಲೆಗೆ ನಡೆದ ಮಕ್ಕಳುತ್ಸಾಹಕ್ಕೆ, ಎಡಬಲದ
ಗಿಡಮರಗಳಲ್ಲಿ ಚೈತ್ರ ನಗುವ ಚಿಗುರು.
ಆಫೀಸಿನ ಕುರ್ಚಿ ಮೇಜುಗಳ ರೀತಿ ರಿವಾಜು
ಗಳಲ್ಲಿ ಫೈಲುಗಳು : ಪತ್ರಕುತ್ತರ ಮತ್ತೆ ಸುತ್ತೋಲೆ :

ಟೀಕೆ-ಟಿಪ್ಪಣಿ ಸರಣಿ; ದೂರವಾಣಿಯಲಿ ದೂರುಗಳು.
ಸುಸೂತ್ರ ಸಾಗುತ್ತಿದ್ದಂತೆ ಕೆಂಪು ಪಟ್ಟಿಯಲಿ ಕಗ್ಗಂಟು-

ಹೀಗೆ ಇಪ್ಪತ್ತೆಂಟು ಗಲಿಬಿಲಿಯ ನಡುವೆ, ಬಿಟ್ಟೂ
ಬಿಡದೆ ಟೈಪರೈಟರಿನ ಲಯಬದ್ಧ ನಡಿಗೆ; ಕೊನೆಗೆ
ಕೆಳಗಿಂದ ಮೇಲಿನ ತನಕ ರುಜುವಾಗಿ, ಹೊರ ಜಗತ್ತಿಗೆ
ರವಾನೆ. (ಹೇಗಿದ್ದರೂ ಮುಗಿಸಬೇಕಾದ ಕೆಲಸ ತಾನೆ ?)

ಹೊತ್ತು ಇಳಿಯುವ ಸಮಯ : ಬಾಗಿದ ಬೆನ್ನು ಎತ್ತಿ
ಹೊರಗಿನ ಗಾಳಿ ಬೆಳಕಿಗೆ ತೇಲಿ ಬರುವಾಗ
ಮೇದು ಮೆಲುಕಾಡಿಸುತ ಬರುವ ದನ-ಕರುಗಳು;
ಹುಡುಗನ ಹೆಗಲಲ್ಲಿ ಜೋತ ಟ್ರಾನ್ಸಿಸ್ಟರಿನ ಹಾಡು.
ಕಟ್ಟಿಗೆ ಹೊರೆ ಹೊತ್ತು ದಣಿದ ಹೆಜ್ಜೆಯ ಹೆಣ್ಣು
ಮಕ್ಕಳ ಹಣೆಯ ಬೆವರು. ಗುಡ್ಡವನ್ನಿಳಿದು
ಸಾಗಿದ ನೆರಳು. ಬಾನ ಮನಸಿಗೆ ಅವಿಸ್ಮರಣೀಯ
ನೆನಪುಗಳ ಮೆಲ್ಲ ತೇಲಿಸಿ ತರುವ ಬೆಳ್ಳಕ್ಕಿ ಸಾಲು.
ಆಟದ ಬಯಲಿನಲ್ಲಿ ಬರೀ ಕ್ರಿಕೆಟ್ಟು.

ಮನೆಯ ಮೆಟ್ಟಿಲು ಹತ್ತಿ ಹಾಗೆ ಹೊರಳಿದರೆ-
ದಿನದ ದುಡಿಮೆಯ ಕೆಂಪು, ಬಾನಿನಲಿ ಮೆಲ್ಲಗೆ
ನಂದಿ, ಒಂದೆರಡು ಅಸ್ಪಷ್ಟ ಚಿಕ್ಕೆಗಳು ಮೂಡಿ
ಗೂಡಿನಲಿ ಸ್ತಬ್ಧ ಹಕ್ಕಿಗಳು.

ಈ ದಿವಸ ಮಾಡಿ ಮಟ್ಟಿದ್ದೇನು ? ಎದೆಯ ತಟ್ಟಿದ್ದೇನು ?
ನಿನ್ನೆಗಳ ಇಂದು ಎಳತಂದು, ನಾಳೆಗುತ್ತರವ
ಹುಡುಕುವ ಉತ್ತರೋತ್ತರ ಕೆಲಸ. ಪುರುಸತ್ತಿರದೆ
ಸುತ್ತುವದು ಹೀಗೆ ನಮ್ಮ ಸುತ್ತು : ಈ ಜಗತ್ತು -
ವಿವಿಧ ಛಂದಸ್ಸಿನಲಿ ಕಸರತ್ತು ಲಯವಾಗಿ, ಈಗೀಗ
ವಿರಳ ಸರಳ ರಗಳೆಯ ಹೊಕ್ಕು ಹೊರಬಂದು
ಮುಕ್ತಛಂದದ ಹೆಸರಿನಲ್ಲಿ ನಿದಾನ ಹೆಜ್ಜೆನಿಂದು.

ಇರುವೆ

ಈಟಿರುವೆ
ಕೀಟಿರುವೆ; ಬಾಲ್ಯದಿಂದಲು ನನ್ನ
ಕಣ್ಣೊಳಗೆ ನಾಟಿರುವೆ.
ಎಲ್ಲಿದ್ದರೂ ಸ್ವಲ್ಪವೂ ಸದ್ದಿಲ್ಲದಿರುವೆ.
ಇದೀಗ
ಗುದ್ದಿನೊಳಗಿಂದ ಪುದು ಪುದು ಎದ್ದು
ಸ್ಪರ್ಶಾಂಗಗಳ ಗಾಳಿಗಾಡಿಸಿ
ಮೂಸಿ, ಗುರುತಿಸಿ, ಅಡ್ಡಿ-
ಆತಂಕಗಳ ದಾಟಿರುವೆ.
ಎಲ್ಲ ತುಳಿದಾಟದಲಿ, ನಿನ್ನದೇ
ಹಾದಿಯನು ಹಿಡಿದು ಹೊರಟಿರುವೆ.

ಕೆಂಪಿರುವೆ
ಕಪ್ಪಿರುವೆ; ಗುಂಪುಗಳ
ಕಟ್ಟಿರುವೆ; ಒಮ್ಮೊಮ್ಮೆ
ಬಿಟ್ಟಿರುವೆ. ಆದರೂ ಸೌಹಾರ್ದದಲಿ
ಮತ್ತೆ ಸಾಲುಗೊಂಡಿರುವೆ.
ಮನೆ-ಹೊಸತಿಲು-ಬೀದಿ ಮೇಲೆ ಸರಸರ ಹರಿದು
ಎಲ್ಲೆಡೆಗು ದೌಡಾಯಿಸಿರುವೆ.
ಎಲ್ಲಿಗೆಲ್ಲಿಗೆ ದಾಳಿ ?
ಗೆದ್ದಲಿನ ಹುತ್ತ, ಕೀಟಗಳ ತೋಟ ?
ಹೂವ ಮಕರಂದ, ಧಾನ್ಯಗಳ ಕಣಜ -

ಮೇಯಲಿಕ್ಕೆ ?
ಹೊಸ ಬಿಡಾರವ ಹುಡುಕಿ ತಂಗಲಿಕ್ಕೆ ?
ನೆಲ ಕೊರೆದು
ಮಣ್ಣ ಕಣ ಕಣವ ಪೇರಿಸಿ
ರಾಣಿಗರಮನೆಯ ಕಟ್ಟಿ ಕಾಪಾಡುವುದಕೆ ?
ಇಲ್ಲ -
ವೈರಿಯ ಜೊತೆಗೆ ಹೋರಾಟಕೆ ?

ಸತ್ತ ಜೀವಿಗಳನೆತ್ತಿ ಎಳೆದು ಹಾಕಿರುವೆ.
ಬಿಳಿ ತತ್ತಿಗಳ ಒಂದೊಂದೆ ಹೊತ್ತು
ದೂರ ಸಾಗಿರುವೆ.
ಎಂಬತ್ನಾಲ್ಕು ಲಕ್ಷ ಜೀವರಾಶಿಗಳಲ್ಲಿ
ನಾನು ಮೇಲಿರುವೆ-ಎನುವಾಗ
ಗುಪ್ತ ಸ್ಥಳವನು ಹೊಕ್ಕು
ಕಚ್ಚಿಬಿಟ್ಟಿರುವೆ.

ಪ್ರತಿ ಯುಗಾದಿಯ ನಸುಕು

ಪ್ರತಿ ಯುಗಾದಿಯ ನಸುಕು ಹೊಸ ಕನಸುಗಳ ಕಡೆದು
ಹೊನ್ನ ಗರಿ ಬಿಚ್ಚಿ ತಂಗಾಳಿಯಲಿ ತೂರುವದು;
ಹಾರುವವು ದಿಕ್ಕು ದಿಕ್ಕಿಗೆ, ಕಾಡನಂಡಲೆದು
ಗೂಡು ಕಟ್ಟದೆ ನಿಗೂಢ ಜೀವ ತಂತಿಯ ಮಿಡಿದು
ಮೋಡಗಳ ಕುಡಿದು, ನಾಡ ಮನಸಿನಲಿ ಮೆಲ್ಲಗೆ
ಕಾವು ಕೂರುವವು. ಯಾವ ಭಾವಕೆ ಯಾವ ಪದ-
ಬಂಧ? ಮೃದ್ಗಂಧ ಹತ್ತೂ ಕಡೆಗೆ ಕಿಡಕಿ ಕದ
ಬಡಿದು, ಉಸಿರಿನ ಛಂದ ಚಿಮ್ಮುವ ನೆತ್ತರೊಳಗೆ.
ಅರಳಿದ ಗುಲಾಬಿ: ನೆಲ-ಮುಗಿಲ ಪ್ರೀತಿಯ ಪಕಳೆ
ಕಿತ್ತು ಮೂಸದಿರು; ಹತ್ತಿರ ಹೋಗಿ, ಬಾಗಿ, ಉಸಿ -
ರೆಳೆದು ಮುತ್ತನಿಡು; ಚಿತ್ತಕಷ್ಟೇ ಸಾಕು. ಬಿಸಿ
ಆರದಂತೆ ಬದುಕು. ಹುಸಿ ಮುಸುಕ ಬಿಸುಡಿ ಬೆಳೆ.
ಬನದ ಹುಣ್ಣಿಮೆ ನಡುಗಿ, ಭಾರತ ಉಧೋ ಎಂದು
ಹೋಳಿ ಓಕುಳಿಯಾಡಿ ಪಾಡ್ಯ ಗುಡಿಗಟ್ಟುವದು.

ಬೆಳುವಲದ ಬಾಗಿನ

ಬಯಲುಸೀಮೆಯ ಬಿರುವಿಸಿಲಿಗೆ ಎರೆ ಹೊಲದೆದೆಯ
ಎರಕಲು ಬೀಡು ಕಾದು ಕಂಗೆಡಿಸಿರಲು, ಮುಗಿಲು-
ಮುಂಗಾರು ಹದಗೊಳಿಸಿ ಮುಂದಿನ ತಲೆಗೆ ಮಿಗಿಲು
ಹಾರೈಸಿ; ಹಿಂಗಾರು: ಜೋಳ ಗೋದಿಯ ತೆನೆಯ
ಸಿಂಗಾರ. ಕಡಲೆ ಮಿಡಿಗೆ ಕೊಡರ್‌ಕೊಂಚೆ ಹಿಂಡು.
ಕುಸುಬೆ ಸಾಲಿನ ಹೂವಿನಂಚೆಲ್ಲ ಜರತಾರಿ.
ಬಿಸಿಲು ಕಾಸಿದ ಬೆಳ್ಳಿ: ಹತ್ತಿ ತೊಳೆ ರೂವಾರಿ.
ಮಾವು, ಹುಣಿಸೆಯು, ಬೇವು ಗುಡಿಹುಣ್ಣಿಮೆಗೆ ಈಡು.
'ಬೆಳುವಲದ ಮುನ್ನೂರು' : ನೆಲ-ನೀರು-ಗಾಳಿಯಲಿ
ಹಲವು ಹಂಬಲ ತುಂಬಿ ಬಿಂಬ ಪ್ರತಿಬಿಂಬದಲಿ
ಒಲವಿನೊಂದೇ ರೂಪ; ಆರೋಗಣೆಯಂಬಲಿ.
ಬಯಲು ದೀಪ ಸ್ತೂಪ ಹೇಗೊ ಹಿಡಿದಿದೆ ಜೋಲಿ.
ದುಡಿಮೆಯೊಳಗೊಂದು ಸುಖ, ನೋವು-ನಲಿವಿನ ಜೀಕ.
ಪಡೆದ ಭಾಗ್ಯವು ಬೇರೆ; ಸಂಸ್ಕೃತಿ ಭೂಮಿ ತೂಕ.

ಗೋಪುರದ ಗಡಿಯಾರ

ಬೆಳಗಾಗುವುದರೊಳಗೆ ಗೋಪುರದ ಗಡಿಯಾರ
ನಿಂತು, ದಿನದ ಕಾರ್ಯದ ತಂತು ಕಡಿದಂತೆ ನಡೆ -
ದಂತೆ ಮತ್ತೆ ಕುಂಟುತ್ತ, ಕನಸಿಗಸ್ಪಷ್ಟ ತಡೆ.
ನಾಲ್ಕೂ ದಿಕ್ಕನವಲೋಕಿಸುತ ನಿರಂತರ
ತುಡಿವಂತರಂಗ. ಕಾಲದಾಚೆಗೆ ಹಾರಿ ಬರು -
ತಿರುವ ಪಾರಿವಾಳದ ಹಿಂಡು. ತಲೆಮೇಲೆ
ಬೆಳ್ಳಿದೀಪದ ಮುತ್ತು. ಇರುಳು ಕವಿಯುವ ಮೊದಲೆ
ಗಂಟೆ: ನಾದವರ್ತುಲ ತುಮುಲ ಭಾವದುಸಿರು.
ಗೋಪುರದ ಅಡಿಗಡಿಗೆ ನಮ್ಮೆಲ್ಲ ಓಡಾಟ
ಸಭೆ, ಸಂತೋಷ ಕೂಟ, ನೆರಳು-ಬೆಳಕಿನ ಬಲೆಗೆ
ಅಂಜಿ ಅಳುಕುವ ಜೀವ. ತೆಂಗು-ಈಚಲ ಕಲೆಗೆ
ಒಂದೆ ಚಿತ್ರದ ಭಾಸ, ತಾಳೆಗರಿ ಹುಡುಕಾಟ.
ಚಂದಕ್ಕೆ ಎಲ್ಲೆಡೆಗು ಹಸಿರು, ಹೂವಿನ ತೋಟ :
ಎದ್ದು ಬಂದಾವು ಜೇನ್ನೊಣ : ಎಚ್ಚರದ ನೋಟ.

ಕರ್ನಾಟಕ ಕಾಲೇಜಿನ ವಜ್ರಮಹೋತ್ಸವಕ್ಕೆ

ಅಜುತಂಜುತ ಬಂದು ಹೆಜ್ಜೆಯಿಟ್ಟೆನು ನಿನ್ನ
ಹೊಂಬೆಳಕಿನಂಗಳಕೆ-ಮೂರು ದಶಕದ ನೆನಕೆ :
ಗಂಭೀರ ಮುಖಮುದ್ರೆ, ಕಣ್ಣು ಮೆಲ್ಲಗೆ ತೆರೆದೆ;
ಸನ್ನೆಯಲಿ ಹತ್ತಿರ ಕರೆದು, ಮೈದಡವಿ, ಅಣ್ಣ -
ತಮ್ಮದಿರೊಡನೆ ಅಂತರಂಗಕ್ಕೆ ಬರಸೆಳೆದೆ.
ಮುಗ್ಧ ಹಣತೆಯ ನೂರು ಸ್ನಿಗ್ಧಸ್ನೇಹದ ಕುಡಿಗೆ
ಬೆಳಕ ಮುದ್ದಾಡಿಸುತ, ದಿನವು ನನ್ನೆದೆಯೊಳಗೆ
ನಿನ್ನದೇನೊ ಬರೆದೆ. ಹೊಸಸೃಷ್ಟಿ: ಬೆರಗಾದೆ.
ಉತ್ತರದ ಕನ್ನಡಿಗರುತ್ತರೋತ್ತರ ಬದುಕೆ
ನಿನ್ನ ಜೀವದ ಬಯಕೆ. ಹೊಂಗನಸುಗಳ ಬಿತ್ತಿ
ಬೆಳೆದು, ಒಂದೊಂದರೊಳು ಮುತ್ತು ರತ್ನವ ಕೆತ್ತಿ
ನಭಕೆತ್ತಿ ಹಿಡಿದೆ : ಉತ್ಸವದಿಂದ ಉತ್ಸವಕೆ.
ಎಲ್ಲಿ ನಿಂತರು ನಿನ್ನ ದೃಷ್ಟಿ ಬೀಳುವ ಹಾಗೆ
ವಿಶ್ವವಿದ್ಯಾಲಯದ ವಿನ್ಯಾಸ, ವಜ್ರದೊಸಗೆ.

ಜಿಜ್ಞಾಸೆ

ಕಳೆದ ದಿನಗಳು ಎಲ್ಲಿ ಹೋಗಿ ಕೂಡುತ್ತಿಹವೊ
ಬರುವ ದಿನಗಳು ಮತ್ತೆ ಎಲ್ಲಿಂದ ಬರುತಿಹವೊ
ಇರುವ ದಿನಗಳು ಕರಗಿ ಬೆರಗುಗೊಳಿಸುತ್ತಿಹವು;
ತಿಗುರಿಯಲಿ ಮಣ್ಣಿನ ಮುದ್ದೆ ಪಡೆದಾಕಾರವೊ-
ಆವಿಗೆಯಲ್ಲಿ ಸುಟ್ಟು ಸಂತೆಗೈತಂದಿಹವು.
ಬಾರಿಸಿ ನೋಡಿ ತಂದು, ಒಲೆಯ ಮೇಲೆಸರಿಟ್ಟು
ಅಟ್ಟುಂಡ ಬದುಕು ವಾಸ್ತವ. ಚಿತ್ರ-ಚೌಕಟ್ಟು
ಒಂದರೊಳಗೊಂದು ಹೆಣಕೊಂಡ ದಾರ ಗೋಜಲು
ಬಿಚ್ಚಿ ಹಾಕಿದ ಬಲೆಯ ತೆಗೆದು ಹಾಕಲು
ಕಗ್ಗಂಟು ಕತ್ತರಿಸಿ, ಮತ್ತೆ ಹುರಿಗೊಳಿಸಿ, ಗೆಲು-
ವಿನಲಿ ಹೆಣಿಕೆಗಣಿಗೈಯಲು ಎಷ್ಟೊಂದು ಹಗಲು
ಕಳೆಯ ಬೇಕಿಹುದೊ;ಇರುಳಿಗು ಅದರದೇ ಕನಸು.
ಕನಸು-ನನಸಿಗು ಸೇತುಕಟ್ಟುವುದೆ ಬಾಳ ಸೊಗಸು ?

ಸಿದ್ಧಗಂಗಾ ಶ್ರೀ

ಬೆಟ್ಟ-ಬಂಡೆಯ ನಡುವೆ ಗಂಗೆ ಪುಟಿದದ್ದೆಂದೊ !
ಜನಜೀವನದ ಕಷ್ಟ ಕೋಟಲೆಯ ಸ್ತರದಲ್ಲಿ
ಇಳಿದು ತಂಪಿಸಿ, ಮತ್ತೆ ಮೇಲೆದ್ದು ಬರುವಲ್ಲಿ
ಸಿದ್ಧ ಸೇವಾಕ್ಷೇತ್ರ : ನಿತ್ಯ ದಾಸೋಹಕ್ಕೆ
ವಿದ್ಯಾ ವಿಶಾಲತೆಗೆ, ನೂತನ-ಪುರಾತನದ
ಚೇತನವ ಹಿಡಿದು ಹೂಡಿ ಜನಮನೋರಥಕೆ
(ಜಾತ್ರೆಯೂ ಬೇಕು ಸರ್ವರುತ್ಸಾಹ ಸೌಂದರಕೆ).
ಏಕಾಂತ ಪಾತ್ರೆಯು ತುಂಬಿ ತೀರದ ನಿನಾದ.
ಕಂಡಿಹೆನು ನಾನವರನ್ನೊಮ್ಮೆ ಹತ್ತಿರದಿಂದ-
ತ್ಯಾಗದೆತ್ತರಕೆ ತೂಗಿ, ಮುಗಿಲು ಸುತ್ತಲು ಬಾಗಿ
ನೆಲದ ಬದುಕಿಗೆ ಕರುಣೆ-ಕಾಯಕದಲ್ಲಿ ಕರಗಿ
ಮಿರುಗುವ ವಿಭೂತಿ : ನಿರ್ಭಾವದಲಿ ನಡೆಯುವಂದ !
ಮನದೊಳಗೆ ಆಗೀಗ ಸದ್ದಿಲದೆಯ ಮೂಡಿ
ಗೆದ್ದವರು : ಪಡೆದದ್ದಲ್ಲ ಹೇಗೊ ಕಾಡಿ-ಬೇಡಿ.

*ಸ್ನೇಹ ಕಾರ್ತೀಕ

ಮುಖವಾಡಗಳ ಅಟಮಟದ ನಟನೆಯ ನಡುವೆ
ದಿಟವ ದಿಟ್ಟಿಸಿ, ಧೈರ್ಯದಲಿ ಮುಂದಿಟ್ಟ ಹೆಜ್ಜೆ -
ಬುಟ್ಟಿಗಟ್ಟಲೆ ಮಾತು : ಹೊರಸಿದವರಿಗೆ ಒಜ್ಜೆ.
ಶ್ರುತಿಗೆ ಸರಿಯಾದ ಕೃತಿ; ಏಕೆ ಉಪಕೃತಿ ಗೊಡವೆ ?
ಕತ್ತಲೆಯ ಜೀರುಂಡೆ ಮೇಳಕುತ್ತರವಾಗಿ
ನಕ್ಷತ್ರಗಳ ಮುಗುಳು ನಗೆ, ಬಾನ ಗಂಭೀರ
ಬಗೆ : ಧ್ಯಾನ. ನಸುಕಿನಲಿ ನಿದ್ದೆತಿಳಿದೆದ್ದವರ
ಕಂಡರಳುವದು ಕೈಮುಗಿದ ಮೊಗ್ಗೆ ತಾನಾಗಿ.
ನೋವು ತುಂಬಿದ ನಾವೆ ನಡೆಸಿ ಕವಿತೆಯ ಹುಟ್ಟು
ಅಟ್ಟಹಾಸದ ದೂರ ತೆರೆಯಾಚೆ ಸೌಂದರ್ಯ
ಶೋಧ. ಚಿಂತನ ಕ್ಷಿತಿಜ: ಗುರಿ ನಿರಿಗೊಳಿಪ ಕಾರ್ಯ
ತತ್ಪರತೆ. ಸತ್ತ್ವವೆಲ್ಲಿದೆ ರಜ-ತಮವ ಬಿಟ್ಟು ?
ನೂರು ಶರದೈಸಿರಿಗೆ ಏರಬೇಕಿದೆ ಜೀಕ -
ತೂಕ. ಅದಕೆ ಹಾರೈಕೆ : ಸ್ನೇಹಕಾರ್ತೀಕ.

* ಡಾ|| ಜಿ. ಎಸ್. ಶಿವರುದ್ರಪ್ಪನವರಿಗೆ ಐವತ್ತರ ಅಭಿನಂದನ.

'ಸಿಂಪಿ'ನೊಳಗಿನ ಮುತ್ತು

ಜಾನಪದ ಶುದ್ಧ ಸಿಂಪಿನೊಳಿಂದ ಹೊರಬಿದ್ದ
ಜಾತಿ ಮುತ್ತಿನೊಲು ತಂಪಾಗಿ, ಮುಖದಲುಕ್ಕುವ
ಮುಗ್ಧ ಬಗೆ. ಮಾತೆತ್ತಿದರೆ ಹಳ್ಳಿ ಹೊಳೆಯಿಸುವ
ಒಳ್ಳೆ ಮಾಸ್ತರ ಶಿಸ್ತು. ಬದುಕಿನಲಿ ಮುಳುಗೆದ್ದ
ತಿಳಿವು; ತಳದಲ್ಲಿ ತಳತಳ ಹೊಳೆವ ಹರಳು ನುಡಿ.
ತೃಪ್ತಿ ತುಂಬಿಕೊಂಡೇ ಇರುವ, ನಂಬಿಕೊಂಡೇ
ನಡೆವ, ಅಧ್ಯಾತ್ಮ-ವ್ಯವಹಾರ ಬೆರೆತುಕೊಂಡೇ
ಬರುವ ಲಿಂಗಣ್ಣ : ಗುರು ಮಧುರ ಚೆನ್ನರ ಗರಡಿ -
ಯಾಳು. ಕೊರಳಲ್ಲಿ ಸದಾ ಅರವಿಂದ ಗ್ರಂಥ-
ಮಾಲೆ. ಹೊಸಗನ್ನಡದ ಹೊಸತಿಲ ದಾಟಿ ಗರತಿ-
ಹಾಡಿಗೆ ಮಲ್ಲಿಗೆ ದಂಡೆ ಮುಡಿಸಿ, ಈ ಸರಸತಿ
ಜೀವನದ ಸಂಗೀತವೆನಿಸಿ, ಎಲ್ಲರ ಪಂಥ
ತಣಿಸಿ, ನವಿಲನು ಕುಣಿಸಿ, ದಣಿವ ತೋರದವರು.
ಬಾಯಾರಿದವರಿಗೆ ಹಲಸಂಗಿ ಬೆಲ್ಲ-ನೀರು.

*ಗೌರೀಶರ ಗೌರವ

ಕಣ್ಣೆದುರು ರಸ-ಕಡಲು, ಶಾಸ್ತ್ರಕಾನನ ಬದಿಗೆ,
ಅನುಭವ ಘಟ್ಟವೇರಿಳಿದು ಭಾವ ಸಂತುಷ್ಟ
ವಾಸ್ತವದ ಕ್ಲೇಶ ಶ್ಲೇಷೆಯಲದ್ದಿ ಸಂಪುಷ್ಟ.
ಪುಟ್ಟ ಗೂಡಿನ ನೆಟ್ಟನೋಟ ಕ್ಷಿತಿಜದವರೆಗೆ.
ದೂರದೂರದಿ ಸಾಗಿ ಬರುವ ಹಡಗಿನ ಬೆಡಗು
ಸೆರೆ ಹಿಡಿದು, ರಂಪಣಿ ದೋಣಿ ಕೈಬಿಡದೆ-ಮೀನು
ಕೊಂಡು ಕೊನೆದಾಡಿ ಜನತೆಯ ನಾಡಿ ಹಿಡಿದವನು.
ಹತ್ತು ಕಡೆ ಕೈಚಾಚಿ, ಮಳಲದಂಡೆಯ ಬುರುಗು
ತೊರೆದು, ತೆರೆಮರೆಗಿಳಿದು ಮುತ್ತು-ಹವಳವ ಬಾಚಿ
ಬಯಲುಸೀಮೆಯ ಕೊರಳಿಗಿತ್ತೆ : ತುಂಬಿಸಿ ಕೊರತೆ.
ಕ್ಷೇತ್ರದೊಳಗಿದ್ದು ವಿಚಿಕಿತ್ಸೆ, ವೈಚಾರಿಕತೆ -
ನಿಷ್ಕಪಟ ಪಟ ಸೂತ್ರಧಾರಿ, ಸಮ ದಿಕ್ಸೂಚಿ.
ಬೆಟ್ಟದ ನೆಲ್ಲಿಗುಪ್ಪು ಕೊಟ್ಟೆ ನೀ ರುಚಿಕಟ್ಟು
ಸೌಹಾರ್ದ ಸಾಗರಕೆ ಎಲ್ಲಿದೆ ಎಲ್ಲೆಕಟ್ಟು ?

* ಶ್ರೀ ಗೌರೀಶ ಕಾಯ್ಕಿಣಿಯವರಿಗೆ ಅರುವತ್ತರ ಗೌರವ.

ಖಗ್ರಾಸ ಗ್ರಹಣ

ಸೂರ್ಯನಿಗೆ ವಜ್ರಕಿರೀಟವ ತೊಡಿಸಿ, ತಕಪಕ
ಕುಣಿವ ಚಂದ್ರ. ಹಗಲು ಬೆಳುದಿಂಗಳಿನ ಗುಂಗಿಗೆ
ಭೂಮಿಗನಿರೀಕ್ಷಿತ ಸರಳ ರೇಖೆಯ ಸುಖ -

ಎರಡೇ ನಿಮಿಷ. ನಿಂತ ಕಾಲಿನ ಮೇಲೆ ನೆರಳು -
ಬೆಳಕಿನ ತೆರೆಗಳೋಟ. ನಾಯಿಯ ನರಳು. ದಿಕ್ಕು
ತಪ್ಪಿದ ಹಕ್ಕಿ, ಏರಿಸಿದ ಜೀರುಂಡೆ ಕೊರಳು.

ಮತ್ತೆ ತೇಜಃಪುಂಜ ಚಿಮ್ಮಿ, ತಕ್ಷಣವೆ ಹೊರ
ಬಿದ್ದ ಸೂರ್ಯ : ಮುಗಿಸಿ ಶತಮಾನದ ಮಹಾಕಾರ್ಯ.
ಇಳಿದಿತ್ತು ಒಳಗೇ ಕುಸಿದವರ ಎದೆಯ ಭಾರ.

ರಾಹು-ಕೇತುಗಳಿಂದ ಮೋಕ್ಷ ದೊರೆಯುವವರೆಗೆ
ಮುಚ್ಚಿಬಿಟ್ಟರು ಕಣ್ಣು : ನಿಸರ್ಗದದ್ಭುತಕ್ಕೆ.
ಶುಭಾಶುಭ ಗುಣಿಸಿ ಸಾಗಿದರು ಬಚ್ಚಲು ಮನೆಗೆ.

ಸ್ವಯಂಪ್ರಕಾಶಕ್ಕೆ ನೆರಳು ಬಿದ್ದಂತೆ ಭಾಸ.
ನಮ್ಮ ಉಪಗ್ರಹಗಳೆ ನಮ್ಮ ಕಣ್ಣಿಗೆ ಮೋಸ.

ವಂದನ

ಮುಗಿಲಿನ ಜಗುಲಿಗೆ ಭೂಮಿಯನೆತ್ತುವ
ಸೂರ್ಯ-ಚಂದ್ರ ಸಮದೃಷ್ಟಿ ನಮೋ:
ಹಗಲಿರುಳಿಗೆ ನೊಗ ಹೂಡಿ ರೂಢಿ ಹದ-
ಗೊಳಿಸುವ ಬದುಕಿನ ಕೆಳೆಗೆ ನಮೋ.

ಕತ್ತಲೆ-ಮುಡಿ ನಕ್ಷತ್ರ ಹೊಳೆವ ಬಾ-
ನೆತ್ತರ ಕರುಣೆಯ ಕಾಂತಿ ನಮೋ;
ತಂಗಾಳಿಗೆ ಸುಮ ಸೌರಭವರಳಿಸಿ
ಹೊರಳುವ ಬೆಳಗಿನ ಶಾಂತಿ ನಮೋ.

ಗುಡುಗು-ಮಿಂಚು-ಮಳೆ-ಗಾಳಿ ಓಲಗವ-
ಗೈವ ನಿರ್ಮಲಾಗಸವೆ ನಮೋ;
ಎಲ್ಲ ಅಲ್ಲ-ಕಲ್ಲೋಲದಲ್ಲು ಕೈ -
ಗೂಡಿ ಬಂದ ಸಂಬಂಧ ನಮೋ.

ಬಿಸಿಲು ಸೋಸಿ ಬೆಳದಿಂಗಳೆಸೆವ
ಸರ್ವಾಂಗ ಸುಖದ ಸಂತೃಪ್ತಿ ನಮೋ;
ನವೋದಯದ ನವರಸದ ಜೀವ ನಸು-
ನಗುವ ಬಗೆಯ ಚಿತ್ಕಳೆಗೆ ನಮೋ.

ಹಾಡು

ಮುಗಿಲ ಬಸಿರ ಬಯಲಿನಿಂದ
ಹಗಲಿರುಳಿನ ಕೊಯಿಲಿನಿಂದ
ಹೊಸ ಗಾಳಿಯ ಸುಯ್ಲಿನಿಂದ
ದಶ ದಿಸೆಗಳು ಮೊರೆದಿವೆ.

ಎಲೆಎಲೆಗಳ ನಲುಗಿನಲ್ಲಿ
ಬದುಕಿನ ಕೂರಲಗಿನಲ್ಲಿ
ಹೊಂಗಿರಣದ ಗಲಗಿನಲ್ಲಿ
ಸುಖ-ದುಃಖವ ಬರೆದಿವೆ.

ಒಳಬಾಳಿನ ತೆರೆಗಳಲ್ಲಿ
ಎದೆಯಾಳದ ಕರೆಗಳಲ್ಲಿ
ದುಡಿಮೆಯ ಹಿರಿ ಹೊರೆಗಳಲ್ಲಿ
ಸಂಕಲ್ಪದ ಹದವಿದೆ.

ಮನಮನಗಳ ಅರುಹಿನಲ್ಲಿ
ಮಾಂಗಲ್ಯದ ಕುರುಹಿನಲ್ಲಿ
ಕರುಣೆಯ ಕಂದೆರವಿನಲ್ಲಿ
ಜೀವದ ಸಂಮುದವಿದೆ.

ಹೆಸರಾಯಿತು 'ಕರ್ನಾಟಕ'

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ;
ಹಸಿಗೋಡೆಯ ಹರಳಿನಂತೆ
ಹುಸಿಹೋಗದ ಕನ್ನಡ.

ಹೊಸೆದಹಾಗೆ ಹುರಿಗೊಳ್ಳುವ
ಗುರಿ ತಾಗುವ ಕನ್ನಡ;
ಕುರಿತೋದದ ಪರಿಣತಮತಿ-
ಅರಿತವರಿಗೆ ಹೊಂಗೊಡ.

ಪಡುಗಡಲಿನ ತೆರೆಗಳಂತೆ
ಹೆಡೆ ಬಿಚ್ಚುತ ಮೊರೆಯುವ
ಸಹ್ಯಾದ್ರಿಯ ಶಿಖರದಂತೆ
ಬಾನೆತ್ತರ ಕರೆಯುವ.

ಗುಡಿ-ಗೋಪುರ ಹೊಂಗಳಸಕೆ
ಚೆಂಬೆಳಕಿನ ಕನ್ನಡ;
ನಮ್ಮೆಲ್ಲರ ಮೈಮನಸಿನ
ಹೊಂಗನಸಿನ ಕನ್ನಡ.

ತ್ರಿಪದಿಯಿಂದ ಸಾಸಿರಪದಿ
ಸ್ವಚ್ಛಂದದ ಉಲ್ಲಾಸ.
ಭಾವಗೀತ, ಮಹಾಕಾವ್ಯ -
ವೀರ -ವಿನಯ ಸಮರಸ.

ಹಳ್ಳಿ - ಊರು, ನಗರ - ಜಿಲ್ಲೆ
ಮೊಗದ ಹೊಗರು ಕನ್ನಡಿ;
ಎಲ್ಲ ದಿಸೆಗು ಚೆಲ್ಲುವರಿದ
ಚೈತನ್ಯದ ದಾಂಗುಡಿ.

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ;
ಹಸಿ ಗೋಡೆಯ ಹರಳಿನಂತೆ
ಹುಸಿಹೋಗದ ಕನ್ನಡ.

*ಏಳಿ, ಬೆಳ್ಳಿ ಮೂಡಿದೆ

ನೂರು ಮನಸು, ನೂರು ಕನಸು
ಏಳಿ : ಬೆಳ್ಳಿ ಮೂಡಿದೆ -
ರಥೋತ್ಸವದ ರಥಕೆ ಮುಂದೆ
ಧ್ರುವ ಮಂಡಲ ಹರಡಿದೆ.

ಇದು ವಾಸ್ತವ, ಇದು ಕಲ್ಪನೆ
ಸದ್ದಿಲ್ಲದ ಸಾಧನೆ;
ಹೊಸ ಯುಗಾದಿ, ಹೊಸ ದಿಗಂತ
ಹೊಸ ಗುರಿಗಳ ಶೋಧನೆ.

ವಿಶ್ವದೆದೆಯ ತೆರೆದನುಭವ -
ಕನ್ನಡಕುಲ ಚಿಂತನೆ;
ಎದ್ದೇಳುವ ಜನಪದವೇ
ಸದ್ಭಾವಕೆ ವಂದನೆ.

ಅಸಂತೋಷ, ಅಸಹನೆಗಳ
ತಿರುಗಣಿ ಮಡು ಆಚೆಗೆ;
ಸೌಹಾರ್ದದ, ಸೌಂದರ್ಯದ
ಒಲುಮೆಯ ದಡ ಈಚೆಗೆ.

---

* ಕರ್ನಾಟಕ ವಿಶ್ವವಿದ್ಯಾಲಯದ ಬೆಳ್ಳಿಹಬ್ಬದ ಸಂದರ್ಭ.

ನಯ-ವಿನಯವೆ, ಸೌಜನ್ಯವೆ
ವಿದ್ಯೆಯ ತವರ್ಮನೆಯೆ-
ಬುದ್ಧಿಗೆ ಹೃದ್ಗತವು ಹೊಳೆಯೆ
ಉದ್ಧಾರವು ಸನಿಹವೆ.

ನೂರು ಮನಸು, ನೂರು ಕನಸು
ಏಳಿ : ಬೆಳ್ಳಿ ಮೂಡಿದೆ;
ದಣಿವಿಲ್ಲದ ದುಡಿಮೆಗಾಗಿ
ಇಡಿ ಹಗಲೇ ಕಾದಿದೆ.

ಯುವಶಕ್ತಿ

ಯಾವ ಕಾಲಕೂ, ಯಾವ ದೇಶಕೂ
ಯುವಕ ಶಕ್ತಿ ಚಿಲುಮೆ;
ಇಳೆಗೆ ಇಳಿದು, ಆ ನಭಕೆ ಬೆಳೆದು, ಜಗ
ಕಾಸಿ ಬಡಿವ ಕುಲುಮೆ.

ಮಾತಿನಂತೆ ಮನ, ಮಾಟದಲ್ಲಿ ಘನ
ಧ್ಯೇಯವೊಂದೆ ಪ್ರಾಯ;
ನ್ಯಾಯ-ನೀತಿ-ನೆಲೆ, ಪ್ರೀತಿ-ಸ್ನೇಹ-ಕಲೆ
ಮಾನವತೆಯ ಶ್ರೇಯ.

ಜಗದ ಹರವು, ಜೀವನದ ತೆರವು ತುಂ-
ತುಂಬಿ ಯುವಜನಾಂಗ
ತಲೆಮಾರಿಗೊಂದು ಹೊಸ ಅಲೆಯು ಬಂದು
ನಿರ್ಮಲವು ನಾಟ್ಯರಂಗ.

ಮಲೆತು ನಿಂತ ಕೊಳೆ ತೊಳೆದು ಹೊಚ್ಚಹೊಸ
ಬೆಳಕಿನತ್ತ ನಡಿಗೆ -
ಜನದ ಬದುಕಿನಲಿ ಬೆರೆತು ಬೇರು ಎಲೆ-
ಮಣ್ಣು-ಹೊನ್ನ ಕೊಡುಗೆ.

ಯಾವ ಕಾಲಕೂ, ಯಾವ ದೇಶಕೂ
ಯುವಕ ಶಕ್ತಿ ಚಿಲುಮೆ;
ಇಳೆಗೆ ಇಳಿದು, ಆ ನಭಕೆ ಬೆಳೆದು, ಜಗ
ಕಾಸಿ ಬಡಿವ ಕುಲುಮೆ.

ನಾಗರ ಪಂಚಮಿ

ಮಳೀ ಸುರಿದು ಹೋತೋ ಅಣ್ಣ
ಬೆಳೀ ತುಂಬಿ ಬಂತೊ ||

ದಾಸವಾಳ ನಂದಿಬಟ್ಲ
ಗುಲಾಬಾಕ್ಷಿ ಮಲ್ಲಿಗಿ ಜಾಜಿ
ಪಾರಿಜಾತ ಸಂಪಿಗಿ ಗೌರಿ
ದಾರಿ ತುಂಬ ಸುರದಾವಲ್ಲ ||೧||

ಭೂಮಿತಾಯಿ ಎತ್ತಿಕೊಂಡು
ಬೋಲ ಬಗರಿ ಆಽಡಿಸುತ್ತ
ಬಾಯಿ ತೆರೆದ ಹುತ್ತದೊಳಗೆ
ಜೀವದ್ಹಾಲು ಹೊಯ್ದಽಳಲ್ಲ ||೨||

ಹಸಿರು ಸೀರಿ, ಹೂವಿನ ಸೆರಗು -
ತವರು ಮನೆಯ ನೆನೆಸಿ ಬಂದು
ಒಕ್ಕಲಾಗಿ ಅಕ್ಕರತೀಲೆ
ಜೋಽಕಾಲಿ ಆಡ್ಯಾರಲ್ಲ ||೩||

ನೋವು-ನಲಿವು ಹಿಂದುಽ-ಮುಂದು
ಪ್ರೀತಿಯೊಂದ ಜಪ್ಪಿಸಿಕೊಂಡು
ಹುರುಪಿನಿಂದ ಎಲ್ಲರ ಕೂಡ
ಜೀಕುವದೆ ಜೀವನವೆಂದು ||೪||

ನಿನ್ನ ಕರುಣೆಗೆ

ನಿನ್ನ ಕರುಣೆಗೆ ನಾನು ಕೇಂದ್ರವಾಗಿ
ನಿಂದಿರುವೆ ಮೌನದಲಿ ತಲೆಯ ಬಾಗಿ.

ಮುಗಿಲಿಂದ ಹಗಲಿಂದ ಇರುಳಿಂದ ಬಂದು
ಮುಗಿಯದಾವುದೊ ಮಹಾದ್ಭುತವ ತಂದು
ಬದುಕು ಪೊರೆಪೊರೆ ಬಿಚ್ಚಿ ಹದಗೊಳಿಸಲೆಂದು
ಒಳಗು ಹೊರಗೂ ತುಂಬಿ ತುಳುಕಿರುವೆ ಇಂದು.

ಅಂಜುವೆನು, ಅಳುಕುವೆನು ಅಷ್ಟಿಷ್ಟಕೆಲ್ಲ
ಮಂಜು ಮುಗಿಬೀಳುವದು ಭೂಮಿ ಬಾನೆಲ್ಲ;
ಹಿಂಜುವವು ನೂರಾರು ನೇಸರನ ಕಿರಣ
ಜೇಡಬಲೆ ತುಂಬೆಲ್ಲ ಮುತ್ತಿನಾಭರಣ.

ಒಂದೊಂದೆ ಹೂವುಗಳ ಆಯುವದು ಹೇಗೆ ?
ಆ ಬಣ್ಣ ಆ ನವುರು ಅದಕದರ ಸೋಗೆ.
ಸೃಷ್ಟಿಯಲಿ, ದೃಷ್ಟಿಯಲಿ ನಡೆದಿಹುದು ಪೂಜೆ
ಕಷ್ಟ-ಸುಖ-ಸಂಭ್ರಮದ ಸಂತೋಷದಾಚೆ.

* ಶರಣು ಅಮ್ಮ

ಮನೆಯೆ ಮಠವಾಗಿಹುದು -
ಹೊಸತಿಲೊಳಗೆ;
ಕರುಣೆ ಹಣ್ಣಾಗಿಹುದು
ನೋಟದೊಳಗೆ.

ಎಲ್ಲೊ ಕಂಡಂತಿಹುದು
ಈ ಹುಣ್ಣಿಮೆ;
ಯಾರು ಬರೆದಿರಬಹುದು
ಈ ಕಣ್ಣಿಮೆ ?

ಮೇಲೆ ಕುಳಿತವರಲ್ಲ -
ನೆಲದ ಮಮತೆ;
ಜೀವ ಸಾಮೀಪ್ಯದಲಿ
ಭಾವ ಸಮತೆ.

ನೋಡಿದ್ದು, ನುಡಿದದ್ದು
ಒಂದೆ ಗಳಿಗೆ;
ಇಳಿದಿರುವೆ ಇಂಗಿರುವೆ
ನನ್ನ ಒಳಗೆ.

---

* ಸಜ್ಜಲಗುಡ್ಡದ ಶರಣಮ್ಮನವರ ದರ್ಶನ.

ನಾವು ಬಾಗುವ ಮೊದಲೆ
ಕೈ ಮುಗಿವಿರಿ.
ನಿಮ್ಮ ಹೆಸರೇ ಶರಣು -
ಅಮ್ಮ, ಗೌರಿ.

ಹರಸಿದಿರಿ ಮೌನದಲಿ
ಹಣ್ಣು-ಕಾಯಿ;
ಮರೆಯುವೆನೆ ಆ ನಿಮ್ಮ
ಕಣ್ಣು, ತಾಯಿ !

* ಮಹಾಂತ ಭಿಕ್ಷೆ

ಚಿತ್ತ ಚಿತ್ತರಗಿಯಲಿ ಮೂಡಿತು
ಹತ್ತು ದಿಕ್ಕಿಗು ಚಾಚಿತು.
ಶ್ರೀ ವಿಜಯ ಮಹಂತೇಶ ಧ್ಯಾನದಿ
ಹೊಚ್ಚ ಹೊಸಬಗೆ ತೆರೆಯಿತು.

ಪದವಿ-ಪಲ್ಲಕ್ಕಿಗಳ ಮೆಲ್ಲಗೆ
ಬದಿಗೆ ಸರಿಸುತ ಮಾಗಿತು.
ಹೃದಯದಂತಃಕರಣ ಜೋಳಿಗೆ
ಜನದ ಹತ್ತಿರ ಸಾಗಿತು.

ಊರು ಊರಿಗು ನಡೆದೆ ನಡೆದರು -
ನೀತಿ-ನಿಚ್ಚಳ ನಡತೆಗೆ;
ಕೇರಿ ಕೇರಿಯ ಮನೆಯ ಬಾಗಿಲು
ತೆರೆದು ಕರೆದರು ಬೆಳಕಿಗೆ -

ದುಡ್ಡು ದುಗ್ಗಾಣಿಯನು ಬೇಡೆನು;
ನಿಮ್ಮ ನೆಮ್ಮದಿ ಬಾಳಿಗೆ -
ನೀಡಿರಯ್ಯಾ ದುಷ್ಟ ಚಟಗಳ
ತುಂಬಿಕೊಳುವೆನು ಜೋಳಿಗೆ.

* ಇಳಕಲ್ಲಿನ ಶ್ರೀ ಮಹಾಂತಸ್ವಾಮಿಗಳು ಕೈಗೊಂಡಿರುವ ಜನತೆಯ ದುಷ್ಟ ಚಟಗಳ ನಿವಾರಣೆಯ ಜೋಳಿಗೆಯ ಕಾಯಕ

ಇದ್ದು ಬಿದ್ದುದ ಕಳೆದುಕೊಂಡಿರಿ
ಬಡತನದಿ ಬೆಂಡಾದಿರಿ;
ಯಾವ ಮೊಗದಲು ಗೆಲವು ಕಾಣದು-
ಸಾವ ಮೊದಲೇ ಸತ್ತಿರಿ.

ಬಾಯ ಮಾತೇ ಕಾಯಕವು ? ನಿಜ
ದುಡಿಮೆಗೆಂದೇ ದೇಹವು;
ಮನಸಿನಲ್ಲಿಯೆ ಮಹಾದೇವನು
ಗುಡಿಯೊಳೇನಿದೆ ? ಗಂಟೆಯು.

ಗುಡಿಸಿರೆಲ್ಲಾ ಮನದ ಮೂಲೆಯ -
ಹಿಡಿಸಬಹುದೀ ಜೋಳಿಗೆ;
ಕಳಿಸಬೇಡಿರಿ ಬರಿಯ ಕೈ, ಹಳ -
ಹಳಿಸಬೇಡಿರಿ ನಾಳೆಗೆ.

ಎಲ್ಲ ವ್ಯಸನಗಳಿಲ್ಲೆ ಹಾಕಿರಿ
ಸಲ್ಲಲಿಂದೇ ಸ್ವಾಮಿಗೆ;
ಬಿಟ್ಟೆನೆಂದರು ಬಿಡದ ಮಾಯೆಯ
ಕಟ್ಟಿಹಾಕುವ ನೇಮಿಗೆ.

ದಾರಿಯಿನ್ನೂ ದೂರವಿದೆ, ಆ
ಸೂರ್ಯ ಚಂದ್ರರು ಸುತ್ತಲಿ;
ಅಚ್ಚಬದುಕಿನ ಹಣತೆ ಹೊತ್ತಿಸಿ
ನಿಚ್ಚ ಬಾಳನು ಬೆಳಗಲಿ.

ನಾನು ಮತ್ತು ಇತರರು

ತಣ್ಣಗಿನ ಈ ಶೀತಲ ಜಗತ್ತಿನಲಿ
ಇರುತ್ತಾರೆ ಕೆಲವರು: ನನ್ನಂಥ ಉನ್ಮತ್ತರು;
ಬೆಂಕಿಯನು ಕರಗಿಸುತ, ತಮ್ಮೆಲುವುಗಳ ನೆಣವ ಹೆಪ್ಪುಗಟ್ಟಿಸುತ
ಉರಿಗಿಚ್ಚಿನಿಂದ ನೀರ ಹದಗೊಳಿಸುತ್ತ
ಬಯಕೆಗಳ ಬೆನ್ನ ಕಪ್ಪು ಕತ್ತಲೆಯ ಬೆಳಗಿಸುತ್ತ
ಬಳಿಯಲ್ಲೆ ಸುಳಿಯುತ್ತಾಳೆ ಹಾಲುಗಲ್ಲು-ಹರಯದ ಚಲುವೆ
ಬಯಕೆಗಳನುದ್ದೀಪಿಸುತ್ತ.

ಶಬ್ದಗಳ ಹಾಳು ಸುರಿಯುವ ಮರಳುಗಾಡಿನಲಿ
ನುಡಿಗೆ ಅರ್ಥ ತುಂಬುತ ಅದಕೆ ನೀಡುವಳು ನಾಲಗೆ.
ಕಲ್ಲುಸಕ್ಕರೆ ಸವಿಯ ಮಿಲನ -ರುಚಿ ತೋರಿಸುತ
ಸೂಕ್ಷ್ಮಾನುಭವಗಳನು ಹೃದಯದಲಿ ಸೃಷ್ಟಿಸುತ
ಜೀವನದ ಕಟುತೆಯನು ಮಧುರಗೊಳಿಸಿ
- ಹೌದು ಕವಿಯಾಗಿಸಿ.

ನಿತ್ರಾಣಗೊಂಡ ಭೋಗಲಂಪಟ ಗಾಳಿ
ಪರ್ವತಶಿಖರಗಳ ಮೇಲ್ಮುಸುಕ ತೇಲಿಸಿಕೊಂಡು ಸಾಗಿ
ಕಾರ್ಮೋಡಗಳ ಮುಟಿಗೆಯಲಿ ಉಂಡೆ ಮಾಡಿ
ಆನೆಗಳ ವಿಹ್ವಲಗೊಳಿಸಿ, ಮದವೇರಿಸಿ;

ಸ್ವರ್ಗದಲಿ ಮಧುತುಂಬಿದ ಕೊಪ್ಪರಿಗೆ ಬಾಯಿ
ತಟ್ಟನೆ ತೆರೆದು ಅಮೃತ ಧಾರೆ;

ದೇಹದಲಿ ಹೊರಸೂಸುವದು ಸುಗಂಧ
ಆತ್ಮವನಲಂಕರಿಸಿ ತೆಗೆದು ನಿರ್ಬಂಧ.

ಪಾತಾಳ ಪುಷ್ಪಗಳ ಅಂದಚಂದಗಳು
ಮಣ್ಣಿಂದ ಹೊಮ್ಮಿ ತಲೆಯನೆತ್ತುವವು.
ಜಡಗೊಂಡ ಶೂನ್ಯ ಗೂಡುಗಳಲ್ಲಿ
ಸ್ಪಂದನ. ಮೆಲ್ಲ ಮಿಡಿಯುವದು ಮಧುರಸ್ವನ.
ಯಾವುದೋ ಮಾಯೆಯಲಿ ಬೀಸಿದ ಗಾಳಿ -
ಸೆಡೆತ ಎದೆಗಳಲಿ ಸತ್ತು ಬಿದ್ದಿರುವ ಬಯಕೆಗಳ
ಉದ್ದೀಪಿಸುವದು; ಆರಿಹೋದ ಬೆಂಕಿಯಲಿ
ಜ್ವಾಲೆಗಳನೆಬ್ಬಿಸುವದು.

ಎಲ್ಲ ದಾರಿಗಳ ಮೇಲೆ
ಗೂಢಗಳ ಸೂರೆಗೊಳಿಸುತ್ತ
ಸವಾರಿಗೈಯುವರು ರೂಪವಿಲ್ಲದನಂತ

ಈ ಹೃದಯಗಳು ಆತ್ಮಗಳು
ಈ ಗುಲಾಬಿ ಹೂಗಳು ಕೋಗಿಲೆಗಳು

ತಣ್ಣಗಿನ ಈ ಶೀತಲ ಜಗತ್ತಿನಲಿ
ದಾರಿನೋಡುವವು ಏಕಚಿತ್ತದಲಿ ಯಾರದೊ
ಮಣ್ಣದೇಹವನು ಬತ್ತಲೆಗೊಳಿಸಿ
ಆತ್ಮದಲಿ ಬೆಳಕು ಸೂಸಿ ?

ಗದ್ಯವನು ನೀರಸಗೊಳಿಸಿ
ಕಾವ್ಯದ ರಂಗು ಹಿಡಿವ

ಈ ಜಗದ ಆಕಸ್ಮಿಕದ ವೈಭವವಿದೇನು ?
ಹೇಗೆ ಹೊರಹೊಮ್ಮುವದು ಮೃದ್ಗಂಧ ?
ಗಾಳಿಗಳು ಅದನೆಂತು ಹೊತ್ತುಸಾಗುವವು ?

ನೀನಿರುವೆ; ಆದರೆ ನೀನು ಯಾರು ?
ನೀನಿದ್ದೆ ಎಲ್ಲಿ ? ಎಲ್ಲಿಂದ ಬಂದೆ ?
ದಯವಿಟ್ಟು ತುಟಿ ಬಿಚ್ಚಿ ಮಾತನಾಡು.
ನೀರಿನ ಮೇಲೆ ನಡೆದ ಯೇಸುವನು
ಶಿಲುಬೆಗೇರಿಸಿದುದೇಕೆ ?
ಜನ್ಮವೆತ್ತಿದಾಗಲೆ ನಗೆಯ ಸೂಸಿದ
ಝುರತುಷ್ಟ್ರನ ಕತ್ತು ಹಿಸುಕಿ ನಿಸ್ಸತ್ವಗೊಳಿಸಿದುದೇಕೆ ?

ನಿನ್ನ ಬೆಂಕಿಯ ಮೇಲೆ ನಾನು ನೀರೆರೆದರೂ
ನನ್ನ ನೀರೇಕೆ ಬೂದಿಯಾಯಿತು, ಹೇಳು.
ಮನೆಯಿಂದ ಮನೆಗೆ ಬಾಗಿಲವ ಬಡಿಯುವೆನು
ಕೈಲಿ ಭಿಕ್ಷಾಪಾತ್ರೆ ಹಿಡಿದು: ಇದರರ್ಥವನು ನೀಡಿರೆಂದು.
ಉತ್ತರ ಕೊಡುವ ಬಾನದೇವತೆ ಮಾತ್ರ
ತನ್ನ ಬಳ್ಳಿಮಾಡದಲಿ ಇನ್ನೂ ಮುಸುಕಿನೊಳಗಿಹಳು.
ನನ್ನಂಥ ಉನ್ಮತ್ತ ಜನ ಉದ್ರೇಕದಲಿ
ಯಾತನೆ ಪಡುತ್ತಲೇ ಸಾಗುತಿಹೆವು.

ಮೂಲ ಕಾಶ್ಮೀರಿ : ಅಮೀನ್ ಕಾಮಿಲ್

ಆಕಾಶ

ಆಕಾಶ ಅಂದರೆ ಏನು ?
ಏನೂ ಒಳಗೊಳ್ಳದ ಶೂನ್ಯವಲ್ಲ; ಅದು
ಮಾನವನ ಆಶೆ ಆಕಾಂಕ್ಷೆಗಳ ವಾಸಸ್ಥಳ.

ಮಾನವ ? ಅವನಲ್ಲ ಇನ್ನು
ಪ್ರತ್ಯೇಕಗೊಂಡ ಏಕಾಕಿ.
ಆಗಸವನೆಲ್ಲ ಅಳೆದು, ಎಲ್ಲೆಗಳ
ಗುರುತು ಹಾಕಿದ್ದಾನೆ.
ಸಾರಿದ್ದಾನೆ ಮಾನವ ಕುಲಕೆ :
"ಸಂಗಾತಿಗಳೆ,
ಅಂತರಿಕ್ಷ ಬಣಬಣಗುಡುವ ಬಯಲಲ್ಲ-
ಸೂಕ್ಷ್ಮಗ್ರಹಣ ತ್ರಾಣ ಲೋಕ.
ಓಜಸ್ವಿ ಪಯಣಿಗನ ಗಾಳಿಸಂಚಾರ,
ಅನಾದಿ, ಅನಂತ ವಿಸ್ತಾರದಾವರಣ.
ಆದಮ್ ಮತ್ತು ಈವ್ : ಸೃಷ್ಟಿಯ ಮೊದಲ ಗಂಡು-ಹೆಣ್ಣು
ವಿಪುಲ ಜೀವನವ ಸೃಷ್ಟಿಸುತ ನಿರಂತರ ಬದುಕಿ
ತುಷ್ಟಿ ಪಡೆಯುತ್ತಿರುವ ತಾಣ.

ಮಾನವನ ದಿವ್ಯೋನ್ಮಾದ
ಹುಚ್ಚಲ್ಲ ಪೂರ್ತಿ -
ಅವ್ಯವಸ್ಥಾ ಸ್ಥಿತಿಯ ಅವಕಾಶಕ್ಕೆ
ಅರ್ಥವತ್ತತೆಯ ತಂದಿಹನು.

ಎಡೆಬಿಡದ ಅವನ ಪರಿಶೋಧನೆಗೆ
ನಭೋಮಂಡಲವು ತನ್ನೆದೆಯ ತೆರೆದಿದ್ದು
ನಿರ್ನಿಮಿತ್ತವಲ್ಲ -

ಅಲ್ಲಿ, ಇಲ್ಲಿ, ಎಲ್ಲೆಡೆಗೂ ಚೆಲ್ಲಾಪಿಲ್ಲಿ.
ಒಂದು ಗೊಂದಲ ಮತ್ತೊಂದರಿಂದ ಸ್ಥಾನಪಲ್ಲಟಗೊಳಲು
ಈ ಕೋಲಾಹಲವ ಲೀಲೆಯಲಿ ಬಿಗಿದಪ್ಪಿ
ಪೂರ್ವದರ್ಥಕ್ರಮವನದಕೆ ಮತ್ತೆ ನೀಡಿದರು
ನೆಲದಣುಗರು.

ಭೂಮಿಯಾಳದ ಗಾಢ ಗೂಢಗಳ ಹೊಕ್ಕವರು
ವೀರ್ಯವತ್ತಾದ, ಪುನಶ್ಚೇತನಗೊಂಡ, ಪ್ರಚಂಡರಭಸದ
ಮೇಲೋಟಕ್ಕೆ ಅಟ್ಟಿದರು
ಕ್ಷೀಣಗೊಂಡಾಶೆಗಳ, ಅಸ್ಥಿಪಂಜರಗಳ.

ಅಸ್ಥಿಪಂಜರಗಳಿನ್ನು ನಿರ್ವೀರ್ಯವಲ್ಲ:
ಪುನರುಜ್ಜೀವಿತ ಮಾನವರ
ನವಮಾನವರ ಹೆತ್ತ ಕೊಡುಗೆ -
ಇವರು
ಪ್ರಾಚೀನ ಆರ್ಯಭಟನಂಥ ಜ್ಯೋತಿಷ್ಕರು.
ಭೂತಾಯ ಮೊಲೆಯುಂಡ ಮಹಿಮಾ ಪುರುಷರು.
ಯುಗಯುಗದ ಹಿಂದೆ ನುಡಿದ ಯಾವುದೊ ಘೋಷ

ಅಸ್ಪಷ್ಟವಾದರೂ ನಿಸ್ಸಂದಿಗ್ಧ:
ಬಹುಶಃ ಇದೇ ಅವರ ಮೊರೆ :
"ಬಾಂಧವರೆ ಏಳಿ

ಮಲಗದಿರಿ
ಆಕಾಶವನ್ನಳೆಯಿರಿ.
ಅಲ್ಲುಂಟು ಮಾನವ ತುಳಿದ ದಾರಿ".
ಮನುಷ್ಯನ ಮಕ್ಕಳೀಗ ಸಾರಿ ಹೇಳುತ್ತಾರೆ ದೃಢವಾಗಿ:
"ದೇವಾ, ಅನಂತ ಆಕಾಶವನ್ನೆ ನಾವು ಸೂರೆಗೊಂಡಿದ್ದೇವೆ"
ಆದಮ್‌ನಿಗೆ ಮತ್ತೊಮ್ಮೆ ಕಿರೀಟವಿಟ್ಟದ್ದಾಯ್ತು.
ಈಶ್ವರನು ಮೆಲುದನಿಯಲ್ಲಿ ನುಡಿದ:
"ಸುಬಹಾನ್ ಅಲ್ ಅಜೀ ಅಸರಾ ಬಿ ಅಬುರಿಹೀ".
ಆಕಾಶದಾಚೆಯ ವಿಶಾಲ ಸುದೀರ್ಘ ಪಯಣದಿಂದ
ಮಾನವನನ್ನು ಮರಳಿ ಮುಟ್ಟಿಸಿದ್ದಾನೆ
ಅವನ ನೆಲೆಗೆ.

ಮೂಲ ಕಾಶ್ಮೀರಿ : ಅಬ್ದುರ್ ರೆಹಮಾನ್ ಅಜಾದ್

ಆತ್ಮ-ಉಪದೇಶ

ಯಾವುದೋ ಅಂಕಿಯ ಮೇಲೆ ನಿಂತುಬಿಟ್ಟ
ತುಕ್ಕು ಹಿಡಿದ ಗಡಿಯಾರದಂತಾಗಿದೆ
ನಮ್ಮ ಚೇತನ.

ಎಂದೋ ಒಂದು ಘಟನೆ ನಮ್ಮನಲುಗಾಡಿಸಿದಾಗ
ಕೂಡಲೆ ತುಸು ಸರಿದಾಡತೊಡಗುತ್ತೇವೆ.
ಕೆಲಹೊತ್ತು 'ಟಿಕ್' 'ಟಿಕ್' ಎಂದು -
ಮತ್ತೆ. ಮತ್ತಾವುದೋ ಅಂಕಿಯ ಮೇಲೆ
ಹಾಗೆಯೇ ನಿಂತು ಬಿಡುತ್ತೇವೆ.

ಈ ಅವಧಿಯಲ್ಲಿ
ಜೇಡಬಲೆ ಕಟ್ಟಿದಂತೆ, ಜಂಗು ಹಿಡಿದಂತೆ
ಅವುಗಳ ಇರುವಿಕೆಯ ಅರಿವೇ ಇಲ್ಲದೆ
ವಿಚಿತ್ರ ಬಯಕೆಗಳನ್ನು, ಭಾವನೆ ಕಲ್ಪನೆಗಳನ್ನು
ನಮ್ಮ ಮನದೊಳಗೆ ಬೆಳೆಸುತ್ತೇವೆ.

ತನ್ನ ಮನಸ್ಸಿನ ಆಳದಲ್ಲಿ ಮನುಷ್ಯ
ಇಣುಕಿ ನೋಡಲೇಬೇಕು.
ತನ್ನ ಆತ್ಮದ ಹೊಸ್ತಿಲ ಬಳಿ
ಪಹರೆ ಮಾಡಲೇಬೇಕು.

ಇಲ್ಲವಾದರೆ ಆತ್ಮಕ್ಕೆ ಒಂದೊಂದಾಗಿ ಕಲೆ
ಬೀಳತೊಡಗುತ್ತವೆ -
ಮೊದಮೊದಲು ಚಿಕ್ಕವಾಗಿ, ಸೌಮ್ಯವಾಗಿ,
ಬರಬರುತ್ತ ದೊಡ್ಡವಾಗಿ, ಕಪ್ಪಾಗಿ.
ಆತ್ಮದ ತಂತಿಗಳು ಆ ಕ್ಷಣ ಕಂಪಿಸಿ
ಆಮೇಲೆ ಅವುಗಳನ್ನು ಸಹಿಸಿಕೊಂಡುಬಿಡುತ್ತವೆ.

ಹೀಗೆ, ಮೆಲ್ಲಮೆಲ್ಲನೆ
ನಿಮ್ಮ ಆತ್ಮವನ್ನು ಬೇರಾವುದೋ ಒಂದು ಪ್ರವೇಶಿಸಿ
ವಶಪಡಿಸಿಕೊಳ್ಳುತ್ತದೆ.
ನಿಮ್ಮ ದೃಷ್ಟಿ ಮಾಲಿನ್ಯವೊ, ಅಥವಾ
ಕಣ್ಣಿನಲ್ಲಿಯೇ ದೋಷವೋ
ನಿಮಗೆ ಹೊಳೆಯದೆ ಹೋಗುತ್ತದೆ.

ಈಗಲ್ಲದಿದ್ದರೂ
ಕೆಲದಿನಗಳ ಮೇಲೆ, ಮನದ ಅನೇಕ
ಕಾಳರಾತ್ರಿಗಳಲ್ಲಿ ತೊಳಲಾಡಿ,
ತಪ್ಪು-ಒಪ್ಪುಗಳ ಇಕ್ಕಟ್ಟಿನ ಶಿಲುಬೆಯಲ್ಲಿ
ನಿರಂತರ ನುರಿಗೊಂಡ ಮೇಲಾದರೂ
ದೃಷ್ಟಿಯಲಿ ದೋಷವಿದ್ದುದರೆಡೆಗೆ
ಯಾರಾದರೂ ಬೆರಳೆತ್ತಿ ತೋರಿಸಲೇಬೇಕು;
ಸಣ್ಣಕಲೆಯೇ ಇದ್ದರೂ ದೃಷ್ಟಿಯಲಿ
ತೀವ್ರ ಪ್ರತಿಕ್ರಿಯೆಯನವರು ತೋರಿಸಲೇಬೇಕು.
ಇಲ್ಲವಾದರೆ
ಆತ್ಮದಲಿ ಏನೇನೋ ಗದ್ದಲ, ಗಲಿಬಿಲಿ, ಗೌಜು.

ಯಾವುದನ್ನೂ ಸರಿಯಾಗಿ ಹೇಳಲೂ ಕೇಳಲೂ
ಆಗುವುದೇ ಇಲ್ಲ.
'ಎಲ್ಲ ಸರಿಯಾಗಿದೆ', 'ಎಲ್ಲ ನಡೆಯುತ್ತಿದೆ' ಎಂಬ ಸಿದ್ಧಾಂತ
ಮನಸ್ಸಿನ ಆಳದಲ್ಲಿ ಬೇರೂರಿ ಬಿಡುತ್ತದೆ.

ನಿಮ್ಮ ಮಗುವಿಗೆ ಆಟಿಕೆ, ಸಿಹಿತಿಂಡಿ, ಶಾಲೆಯ ಸಮವಸ್ತ್ರ
ಕೊಡಬೇಡಿರೆಂದು ನಾನು ಹೇಳುವದಿಲ್ಲ;
ಶುಭ್ರವಾದ ಅಂಗಿ, ನೀಲಿ ಕಂಠವಸ್ತ್ರ
ಬ್ಯಾಂಕಿನಲ್ಲಿ ಹಣ - ಅವನಿಗೆ ಬೇಡವೆಂದಲ್ಲ.
ಆದರೆ, ಅವನ ಆತ್ಮ ಸಹಜವಾಗಿ ಉಸಿರಾಡುವಂತೆ
ಶುದ್ಧ ವಾತಾವರಣವನ್ನು ಅವನಿಗೆ ಆಸ್ತಿಯಾಗಿ ಬಿಡಿ.

ಬಾಳಿನ ಒಳಿತಿನಲ್ಲಿ ತೀವ್ರಶ್ರದ್ಧೆ ಅವನಿಗೆ ಬೇಕಲ್ಲದೆ
ದೊಡ್ಡ ದೊಡ್ಡ ಮಹಲು-ಮಂದಿರಗಳಲ್ಲ,
ನಿಮ್ಮ ಮಗುವಿಗೆ ಬೇಕಾದದ್ದು
ನಿಸ್ತೇಜವಾದ ನಿಮ್ಮ ದೀರ್ಘಾಯುಷ್ಯವಲ್ಲ -
ನಿಮ್ಮ ಉಜ್ವಲವಾದ ಚರಿತ್ರೆ.

ಸದ್ಯದ ನಮ್ಮ ಚರಿತ್ರೆಯೋ -
ಯಾವುದೋ ಅಂಕಿಯ ಮೇಲೆ ನಿಂತುಬಿಟ್ಟ
ತುಕ್ಕು ಹಿಡಿದ ಗಡಿಯಾರದಂತಾಗಿದೆ
ನಮ್ಮ ಚೇತನ.
ಎಂದೋ ಒಂದು ಘಟನೆ ನಮ್ಮನ್ನು ಅಲುಗಾಡಿಸಿದಾಗ
ಕೂಡಲೆ ಸರಿದಾಡಲು ತೊಡಗುತ್ತೇವೆ.
ಕೆಲಹೊತ್ತು 'ಟಿಕ್', 'ಟಿಕ್' ಎಂದು
ಮತ್ತಾವುದೋ ಅಂಕಿಯ ಮೇಲೆ ಹಾಗೆಯೇ
ನಿಂತುಬಿಡುತ್ತೇವೆ.

ಮೂಲ ಪಂಜಾಬಿ : ಸುರಜಿತ್ ಪತಾರ್

ನೀಲ ಪಕ್ಷಿ

ನಾನು ದೇವನ ಪಕ್ಷಿ, ಅವನ ಬಾನೀಜುವೆನು
ದಿವ್ಯ ಉನ್ನತ ಶುಭ್ರ ನೀಲದೊಳಗೆ;
ನಿಜದ, ಇನಿದಾದುದರ ದನಿ ಹಿಡಿದು ಹಾಡುವೆನು
ದೇವನಿಗೆ ದೇವನಂತಹರ ಕಿವಿಗೆ.

ಜ್ವಾಲೆಯಂತೇರುವೆನು ಮರ್ತ್ಯದಾಲಯದಿಂದ
ಕೊರಗು-ಮರುಗುಗಳಾಚೆ ಆಕಾಶಕೆ;
ನರಳುತಿಹ ಅವನ ಹುಟ್ಟಿದ ನೆಲಕೆ ಚೆಲ್ಲುವೆನು
ತುಡಿವ ಭಾವದ ಬೆಂಕಿ-ಬೀಜಗಳನು.

ಕಾಲದೇಶವ ಮೀರಿ ರೆಕ್ಕೆಗೆದರುವೆ ಮೇಲೆ
ಬಾಡಿ ಕಳೆಗುಂದದಿಹ ಬೆಳಕಿನೆಡೆಗೆ,
ಶಾಶ್ವತದ ಮುಖದ ಸುಖದಾನಂದವನು ತರುವೆ
ಆತ್ಮದವಲೋಕನದನುಗ್ರಹ ಬಗೆ.

ನನ್ನ ಮಾಣಿಕದಕ್ಷಿಯಿಂದ ಲೋಕವನಳೆವೆ
ಇಳಿದಿರುವೆ ಜ್ಞಾನವೃಕ್ಷದ ಕೊಂಬೆಗೆ ;
ಸಗ್ಗದೆಲ್ಲಾ ಹೂಗಳಿಲ್ಲಿ ಕಿಕ್ಕಿರಿದಿಹವು.
ಅನಂತತೆಯ ಝರಿ-ತೊರೆಯ ಬದಿಗೆ.

ಜ್ವಲಿಸುವೆನ್ನೆದೆಯಿಂದಲೇನು ಮರೆಮಾಚಿಲ್ಲ
ತೀರವಿಲ್ಲದ ಚಿತ್ತವಿಹುದು ಶಾಂತ;
ಹರ್ಷಾತಿರೇಕದನುಭಾವ ಕಲೆಯೀ ಹಾಡು
ಹಾರುವಿಕೆ-ಗುರಿ ಅಮೃತ ಸಂಕಲ್ಪವು.

ಮೂಲ : ಶ್ರೀ ಅರವಿಂದರ "The Blue Bird"



ಚೆನ್ನವೀರ ಕಣವಿಯವರು ಕನ್ನಡದ ಹಿರಿಯಕವಿಗಳ ಶ್ರೇಣಿಯಲ್ಲಿ ಅಗ್ರಗಣ್ಯರು. ಹೊಸಗನ್ನಡದ ಕಾವ್ಯಕ್ಷೇತ್ರದಲ್ಲಿ ಅವರ ಹೆಸರು ಎಂದೆಂದಿಗೂ ಹಸಿರು. ಕಣವಿಯವರು ಒಟ್ಟು ೧೬ ಕವನ ಸಂಕಲನಗಳನ್ನು ಹೊರ ತಂದಿದ್ದಾರೆ. ವಿದ್ಯಾ ವಿನಯ ಸಂಪನ್ನರಾದ ಕಣವಿಯವರು ಸರಳ ಜೀವಿ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಗೂ ಕವಿಗಳಿಗೂ ಬಹಳ ಕಾಲದ ನಂಟು. ಇಂಥ ಮಧುರ ಬಾಂಧವ್ಯದ ನೆನಪಿನೊಂದಿಗೆ ಈ ಕಾವ್ಯ ಸಂಪುಟಗಳು ಪ್ರಕಟವಾಗುತ್ತಿವೆ.

"........ಕಣವಿಯವರ ಕಾವ್ಯಜೀವನ ಮೂಲತಃ ಪರಿಸರ ಸಂವೇದಿಯಾದದ್ದು. ಬದುಕಿನ ಯಾವುದೇ ಒಂದು ಸಿದ್ಧಾಂತಕ್ಕೆ ಗಂಟು ಹಾಕಿಕೊಂಡು ಸ್ಥಗಿತವಾಗದೆ, ತನ್ನ ಅಭಿರುಚಿಗೆ ಹಾಗೂ ಕಾವ್ಯ ಪ್ರಜ್ಞೆಗೆ ಒಳಗಾದುದೆಲ್ಲಕ್ಕೂ ನಂಟು ಹಾಕಿಕೊಳ್ಳುತ್ತ ಚಲನಶೀಲವಾಗಿ ತನ್ನ ಜೀವಂತಗತಿಯನ್ನು ಪ್ರಕಟಿಸಿಕೊಂಡಿದೆ. ಸಮಕಾಲೀನ ಕವಿ-ಕಾವ್ಯಗಳ ಬೆಳಕಿಗೆ ಮೈಯೊಡ್ಡಿದರೂ ಮನಸ್ಸನ್ನು ಮಾತ್ರ ತಮ್ಮ ಸಹಜಾನುಭವದ ಕಮ್ಮಟವನ್ನಾಗಿ ಮಾಡಿಕೊಂಡು ಮಾನವೀಯತೆ, ನಿಸರ್ಗಪ್ರಿಯತೆ, ಮೌಲ್ಯಪ್ರಜ್ಞೆ, ಅನುಭಾವಿಕತೆ ಇತ್ಯಾದಿ ಮೂಲದ್ರವ್ಯವನ್ನು ತಮ್ಮ ವ್ಯಕ್ತಿತ್ವದಲ್ಲಿ ಕರಗಿಸಿಕೊಂಡು, ತಮ್ಮ ಅಭಿವ್ಯಕ್ತಿಯನ್ನು ರಚಿಸಿಕೊಂಡವರು. ಹೆಜ್ಜೆಯಿಂದ ಹೆಜ್ಜೆಗೆ ಬದಲಾಗುತ್ತ ಬೆಳೆದವರು... ನವೋದಯ ನವ್ಯ ಮಾರ್ಗಗಳೆರಡರ ಸತ್ವವನ್ನು ಬೆಸೆಯುವುದರಲ್ಲಿ ಸಫಲರಾದವರು".

– ಡಾ. ಜಿ.ಎಸ್. ಶಿವರುದ್ರಪ್ಪ

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
9, ರಮ್ಯ, ಗೋಕುಲಂ 3ನೇ ಹಂತ, ಮೈಸೂರು-2